## PAPERS LAID ON THE TABLE.

**Sri A. G. RAMACHANDRA RAO** (Minister for Law and Education).—I beg to lay on the Table, Sir, a copy of Notification No. Fl. (B) 12935—L & P. 14-55-1, dated 20th January 1956, issued under the Mysore Lotteries and Prize Competitions Control and Tax Act, 1951, as required by sub-section (2) of Section 30 of the above Act.

---

## NON-OFFICIAL BILL.

### Mysore Village Offices (Amendment Bill).

**Sri R. ANANTARAMAN** (Chamarajpet).—I learn that the Government are already examining whether it is feasible to bring such legislation in Mysore State. So, I do not propose to move the Mysore Village Offices (Amendment) Bill, 1956.

---

## NON-OFFICIAL RESOLUTIONS.

**Sri H. M. CHANNABASAPPA** (Minister for Industries).—I would like to suggest that the second resolution which stands in the name of Sri R. Muniswamiah may kindly be moved first and the resolution of Sri B. Rachiah may be taken up next. It is a question of accommodation.

**Sri S. SRINIVASA IYENGAR** (T. Narasipur).—I submit that such a thing cannot be done because resolutions are found here according to ballot and nothing can be changed in the order of ballot.

**Mr. SPEAKER.**—The fact as stated by Sri Srinivasa Iyengar is correct; even the Chair has no power to do it because these Resolutions are posted according to ballot. If Sri Rachiah withdraws his resolution, there would be a chance for the second resolution.

---

### Resolution No. 1—Introduction of Prohibition in Nanjangud Sub-Divison.

*ಶ್ರೀ ಬಿ. ರಾಚಯ್ಯ (ಯಳಂದೂರು ಷೆಡ್ಯೂಲ್ಡ್ ಜಾತಿಗಳು).—ಸ್ವಾಮಿ, ಈ ಠರಾವನ್ನು ಮಂಡಿಸಲು ಸಭೆಯ ಅಪ್ಪಣೆಯನ್ನು ಬೇಡುತ್ತೇನೆ. ನನ್ನ ಠರಾವು ಈ ರೀತಿ ಇದೆ:

"ನಂಜನಗೂಡು ಸಬ್-ಡಿವಿಜನ್ನು ಮೂರು ಕಡೆಗಳಲ್ಲಿಯೂ ಮದರಾನು ರಾಜ್ಯದ ಪ್ರದೇಶಗಳಿಂದ ಸುತ್ತುವರಿಯಲ್ಪಟ್ಟಿದೆ. ಹಾಗೆ ಸುತ್ತುವರಿದಿರುವ ಮದರಾನು ರಾಜ್ಯ ಪ್ರದೇಶಗಳಲ್ಲಿ ಪಾನ ನಿರೋಧವು ಜಾರಿಯಲ್ಲಿದೆ, ಆದ್ದರಿಂದ ನಂಜನಗೂಡು ಸಬ್-ಡಿವಿಜನ್ನಲ್ಲಿ ಪಾನ ನಿರೋಧವನ್ನು ಕೂಡಲೆ ಜಾರಿಗೆ ತರಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಇದೇ ವಿಷಯಕ್ಕೆ ಸಂಬಂಧಪಟ್ಟ ನಿರ್ಣಯಗಳು ಎರಡು ಮೂರಿವೆ. ಎಲ್ಲವನ್ನೂ ಒಟ್ಟಿಗೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಸ್ವಾಮಿ, ನಮ್ಮ ಮೈಸೂರು ಸಂಸ್ಥಾನದಲ್ಲಿ ಸ್ವರಾಜ್ಯ ಬರುವುದಕ್ಕೆ ಮುಂಚಿತವಾಗಿಯೇ, ಎಂದರೆ, 1938ನೆಯ ಇಸವಿಯಲ್ಲಿಯೇ ರಾಮನಗರ, ಚೆನ್ನಪಟ್ಟಣ ಮುಂತಾದ ಕೆಲವು ಭಾಗಗಳಲ್ಲಿ ಪಾನ ನಿರೋಧವನ್ನು ಜಾರಿಗೆ ತಂದಿದ್ದರು. ಇದು ಕೆಲವು ಕಾಲ ನಡೆದ ಮೇಲೆ 1947ನೆಯ ಇಸವಿಯಿಂದೀಚೆಗೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮದ್ಯಪಾನದಿಂದಾಗತಕ್ಕ ಕೆಡಕನ್ನು ಸಮಾಜದಲ್ಲಿ ತೊಡೆದುಹಾಕುವುದಕ್ಕಾಗಿ ದೇಶಾದ್ಯಂತ ಪಾನ ನಿರೋಧವನ್ನು ಕ್ರಮೇಣ ಜಾರಿಗೆ ತರತಕ್ಕದೆಂಬ ತತ್ವವನ್ನು ನಮ್ಮ ಸರ್ಕಾರ ಅಂಗೀಕರಿಸುತ್ತಾ ಬಂದಿದೆ. ಈ ಪಾನನಿರೋಧದಿಂದ ಸಂಸ್ಥಾನಕ್ಕಾಗತಕ್ಕ ನಷ್ಟವನ್ನು ಸರಿತೂಗಿಸುವುದಕ್ಕಾಗಿ ಸರ್ಕಾರ 1948ನೆಯ ಇಸವಿಯಲ್ಲಿ ಮಾರಾಟ ತೆರಿಗೆ ಎಂಬ ಒಂದು ತೆರಿಗೆಯನ್ನು ಕೂಡ ಹಾಕಿದರು. ಈ ತೆರಿಗೆ ಹಾಕಿದ ಮೇಲೆ ಈ ತೆರಿಗೆಯು ಕಾನೂನು ಸಂಸ್ಥಾನಾದ್ಯಂತ ಜಾರಿಯಲ್ಲಿದೆ. ಮಾರಾಟ ತೆರಿಗೆಯನ್ನು ಎಲ್ಲ ಕಡೆಯೂ ವಸೂಲು ಮಾಡುತ್ತಿದ್ದಾರೆ. ಆದರೆ ಯಾವ ಉದ್ದೇಶಕ್ಕಾಗಿ ಈ ಮಾರಾಟ ತೆರಿಗೆಯನ್ನು ಸರ್ಕಾರದವರು ವಸೂಲು ಮಾಡುತ್ತಿದ್ದಾರೋ ಆ ಉದ್ದೇಶವನ್ನು ಮಾತ್ರ ಪೂರ್ಣವಾಗಿ ಅವರು ಜಾರಿಗೆ ತರಲಿಲ್ಲ. ಈಗ ಮೈಸೂರು ಸಂಸ್ಥಾನದ ಕೋಲಾರ, ಚಿತ್ರದುರ್ಗ, ಶಿವಮೊಗ್ಗ, ತುಮಕೂರು, ಹಾಸನ ಜಿಲ್ಲೆಯ ಕೆಲವು ಭಾಗಗಳು ಮತ್ತು ರಾಮನಗರ, ಚನ್ನಪಟ್ಟಣ ತಾಲ್ಲೂಕುಗಳಲ್ಲಿ ಪಾನನಿರೋಧ ಜಾರಿಯಲ್ಲಿದೆ. ಇದು ಜಾರಿಯಲ್ಲಿರುವ ಕಡೆ ಸರ್ಕಾರದವರು ಸಾಧ್ಯವಾದ ಮಟ್ಟಿಗೆ, ಈ ವರದಿಯಿಂದ ತಿಳಿದು ಬರುವ ಮಟ್ಟಿಗೆ, ಕುಡಿತದಿಂದ ಆಗುವ ಕೆಡಕುಗಳು ಕಡಮೆಯಾಗುತ್ತ ಬರುವಂತೆ ಮಾಡಿದ್ದಾರೆ. ಕುಡಿತದ ಅಭ್ಯಾಸಕ್ಕೆ ಸಿಕ್ಕಿಕೊಂಡಿದ್ದ ಜನ ಅದನ್ನು ಬಿಟ್ಟಮೇಲೆ ಆರ್ಥಿಕ ಮಟ್ಟದಲ್ಲಿ ಉತ್ತಮಗೊಂಡಿದ್ದಾರೆ. ಅವರು ಜೀವನದಲ್ಲಿ ಮಾಡುತ್ತಿದ್ದ ತಪ್ಪಿತಗಳು, ಎಂದರೆ crimes ಕೂಡ ಕಡಮೆಯಾಗುತ್ತಾ ಬಂದಿವೆ ಎಂದು ವರದಿ ಮಾಡಿದ್ದಾರೆ. ಹೀಗಿದ್ದಾಗ್ಯೂ ಕೂಡ ಸರ್ಕಾರದವರು ಸಂಸ್ಥಾನದ ಆಯವ್ಯಯವನ್ನು ನೋಡಿಕೊಂಡು ಅದಕ್ಕೆ ತಕ್ಕಂತೆ ಈ ನೀತಿಯನ್ನು ಜಾರಿಗೆ ಕೊಡಬೇಕು, ಕ್ರಮೇಣ ಪಾನ ನಿರೋಧ ಜಾರಿಗೆ ಬರಬೇಕೆಂದು ಒಪ್ಪಿಕೊಂಡು ಬಂದಿದ್ದರೂ ಇದನ್ನು ಯಶಸ್ವಿಯಾಗಿ ನಡೆಸದೇ ಇರುವುದು ಶೋಚನೀಯವಾದ ವಿಷಯ. 1948ನೆಯ ಇಸವಿಯಲ್ಲಿ ಪಾನ ನಿರೋಧ ಜಾರಿಗೆ ಬಂದ ಕೆಲವು ಜಿಲ್ಲೆ

ಗಳಲ್ಲಿ 1949ರಲ್ಲಿ ಮುಂದುವರಿಯಿತು. ಅಲ್ಲಿಂದೀಚೆಗೆ 1953ರಲ್ಲಿ ಮಾತ್ರ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಜಾರಿಗೆ ತಂದಿದ್ದಾರೆ. ಅಲ್ಲಿಂದೀಚೆಗೆ ಒಂದು ಹೆಜ್ಜೆ ಕೂಡ ಮುಂದಿಟ್ಟಂತೆ ಕಾಣಲಿಲ್ಲ. ಈ ಕಾರಣದಿಂದ ಸರ್ಕಾರಕ್ಕೆ ಪಾನ ನಿರೋಧದಲ್ಲಿ ಮೊದಲಿದ್ದ ನಂಬಿಕೆ ಇದೆಯೋ ಇಲ್ಲವೋ ಎಂದು ಪ್ರಶ್ನೆ ಮಾಡಬೇಕಾಗಿದೆ. ಒಂದು ವೇಳೆ ಸಂಸ್ಥಾನದ ಹಣ ಕಾಸಿನ ಪರಿಸ್ಥಿತಿಯಿಂದ ಮುಂದುವರಿಸಲಾರದೆ ಅಲ್ಲಿಗೇ ನಿಲ್ಲಿಸಿದ್ದೀವೆ, ನಮ್ಮ ಸಹಾಯಕ್ಕೆ ಕೇಂದ್ರ ಸರ್ಕಾರ ಬಂದರೆ ಆಗ ಮಿಕ್ಕಕಡೆ ಜಾರಿಗೆ ಕೊಡುತ್ತೇವೆ ಎಂದು ಸರ್ಕಾರ ಹೇಳುವುದಾದರೆ, ಕೇಂದ್ರ ಸರ್ಕಾರದ ಅಪ್ಪಣೆಯನ್ನು ಪಡೆದೂ ನೀವು ಪಾನನಿರೋಧ ನೀತಿಯನ್ನು ಒಪ್ಪಿಕೊಳ್ಳಲಿಲ್ಲವೆಂದು ಹೇಳಬೇಕಾಗುತ್ತದೆ. ಕೇಂದ್ರದವರು ದೇಶಾದ್ಯಂತ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳುವುದಕ್ಕೆ ಮೊದಲೇ ಮೈಸೂರು ಸರ್ಕಾರದವರು ಈ ನೀತಿಯನ್ನೊಪ್ಪಿಕೊಂಡು ಮುಂದುವರಿಸಿಕೊಂಡು ಬಂದಿದಾರೆ. ಈ ಇಲಾಖೆಯಲ್ಲಿ ಕಳ್ಳಭಟ್ಟಿ ಸಾರಾಯಿ ಜಾಸ್ತಿಯಾಗುತ್ತಿದೆ, ಆದ ದರಿಂದ ಈ ನೀತಿಯನ್ನು ಯಶಸ್ವಿಯಾಗಿ ಮುಂದುವರಿಸುವುದಕ್ಕೆ ಆಗಲಾರದು, ಮಧ್ಯವರ್ತಿ ಜನರಿಗೆ ಲಾಭ ದೊರೆಯುತ್ತದೆ, ಸರ್ಕಾರಕ್ಕೆ ದೊರೆಯುವುದಿಲ್ಲ ಎಂದು ಹೇಳುವುದಾದರೆ, ಅದಕ್ಕೆ ನಾನೊಂದು ಹೇಳುತ್ತೇನೆ. ನಮ್ಮ ದೇಶಾದ್ಯಂತ ಅನೇಕ ಕಾನೂನುಗಳನ್ನು ಮಾಡಿದ್ದೇವೆ. ಇಂಡಿಯನ್ ಪೀನಲ್ ಕೋಡ್, ಕ್ರಿಮಿನಲ್ ಪ್ರೊಸೀಜರ್ ಕೋಡ್ ಮುಂತಾದ ಅನೇಕ ಕಾನೂನುಗಳನ್ನು ಮಾಡಿದ್ದೇವೆ. ಇವುಗಳಿದ್ದರೂ ಕೂಡ ನಿತ್ಯ ಜೀವನದಲ್ಲಿ ಅನೇಕ ತಪ್ಪಿತಗಳು ನಡೆಯುತ್ತಿವೆ. ಹಾಗೆ ಜನರು ತಪ್ಪು ಮಾಡುತ್ತಿರುವುದರಿಂದ ಈ ಕಾನೂನುಗಳನ್ನೇ ಬಿಟ್ಟುಬಿಡಬೇಕೆಂದು ಹೇಳುವುದಕ್ಕಾಗುವುದಿಲ್ಲ. ಕಾನೂನುಗಳಿದ್ದರೂ ಕೂಡ ಕೆಲವು ತಪ್ಪಿತಗಳಾಗಿಯೇ ಆಗುತ್ತವೆ. ನಮ್ಮ ನೀತಿಯನ್ನು ಯಶಸ್ವಿಗೊಳಿಸಬೇಕೇ ಏನಾ ನಮ್ಮ ನೀತಿಯನ್ನು ಮಧ್ಯದಲ್ಲಿ ಬದಲಾಯಿಸುವುದಕ್ಕಾಗುವುದಿಲ್ಲ. ಅಂದಮೇಲೆ ಪಾನ ನಿರೋಧದಲ್ಲಿಯೂ ಕೂಡ ಅನೇಕ ಎಡರು ತೊಡರುಗಳು ಇವೆ. ಇಡೀ ದೇಶಾದ್ಯಂತ ಜಾರಿಗೆ ತಂದಿದ್ದರೆ ಒಳ್ಳೆಯದಾಗುತ್ತಿತ್ತು. ಆದರೆ ನಮ್ಮ ಸರ್ಕಾರದವರು ಒಂದು ನೀತಿಗನುಗುಣವಾಗಿ, ಎಷ್ಟುಮಟ್ಟಿಗೆ ಮುಂದುವರಿಸಿಕೊಂಡು ಹೋಗ ಬಹುದೋ ಅಷ್ಟುಮಟ್ಟಿಗೆ ಮುಂದುವರಿಸಿಕೊಂಡು ಹೋಗಬೇಕೆಂದು, ಒಂದು ರೀತಿಯಲ್ಲಿ ಜಾರಿಗೆ ತಂದಿದ್ದಾರೆ. ಈ ವರ್ಷ ನಂಜನಗೂಡು ಸಬ್ ಡಿವಿಜನ್‌ನಲ್ಲಿ ಜಾರಿಗೆ ತರಬೇಕೆಂದು ನಾನು ಈ ಠರಾವು ತಂದಿದ್ದೇನೆ. ಈ ಸಬ್-ಡಿವಿಜನ್‌ನಲ್ಲಿ ಈ ಬಾಬಿನಿಂದ ಸುಮಾರು ಹದಿನಾರು ಲಕ್ಷ ರೂಪಾಯಿ ಮಾತ್ರ ಉತ್ಪತ್ತಿಯಾಗುತ್ತಿದೆ. ಅಲ್ಲಿ ಕುಡಿತದ ಹಾವಳಿಯಿಂದ ಬಹಳ ಜನರು ನೊಂದಿದ್ದಾರೆ. ಇದರಿಂದ ಅವರು ತಮ್ಮ ಆರ್ಥಿಕ ಪರಿಸ್ಥಿತಿಯಲ್ಲಿ ಹಿಂದೆ ಬೀಳುವುದಕ್ಕವಕಾಶ ವಾಗಿದೆ. ಅಲ್ಲದೆ ಮದರಾಸು ಪ್ರಾಂತದಲ್ಲಿ ಪಾನ ನಿರೋಧ ಜಾರಿಯಲ್ಲಿರುವುದರಿಂದ ನಮ್ಮ ಮೈಸೂರು ಸಂಸ್ಥಾನದಲ್ಲಿರತಕ್ಕ ಪ್ರದೇಶಗಳ ಅಂಗಡಿಗಳಿಗೆ ಅಲ್ಲಿಂದ ಜನ ಬಂದು ಕುಡಿದು ಹೋಗ ವುದು ಜಾಸ್ತಿಯಾಗುತ್ತಿದೆ. ಅಲ್ಲ ಪಾನ ನಿರೋಧ ಯಶಸ್ವಿಯಾಗಿ ನಡೆಯುವುದಕ್ಕೂ ಇಲ್ಲ ಕಳ್ಳತನದಿಂದ ವ್ಯಾಪಾರ ಮಾಡುವುದನ್ನು ತಪ್ಪಿಸುವುದಕ್ಕೂ ಈ ಸಬ್-ಡಿವಿಜನ್‌ನಲ್ಲಿ ಪಾನ ನಿರೋಧವನ್ನು ಕೂಡಲೇ ಜಾರಿಗೆ ತರಬೇಕೆಂದು ಹೇಳಿ ಈ ನಿರ್ಣಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದ್ದೇನೆ.

Mr. SPEAKER.—Resolution moved:

"This Assembly is of the opinion that prohibition be extended to Nanjangud Sub-Division forthwith as it is surrounded on three sides by Madras areas where prohibition is in force."

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ನಾನು ಈ ನಿರ್ಣಯವನ್ನು ಅನುಮೋದಿಸುತ್ತೇನೆ. ಸಂಸ್ಥಾನದಲ್ಲಿ ಕುಡಿತವನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ಮೊದಲಿನಿಂದಲೂ ನಾವು ಕೇಳಿಕೊಳ್ಳುತ್ತಲೇ ಇದ್ದೇವೆ. ಆದರೆ ಸರ್ಕಾರದವರು ಮಾತ್ರ ಮನಸ್ಸಿಲ್ಲದ ಒಂದು ನೀತಿಯನ್ನು ಅನುಸರಿಸುತ್ತಿದ್ದಾರೆ.

ಅಧ್ಯಕ್ಷರು.—ಮನಸ್ಸಿದೆ, ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ ಅಷ್ಟೆ.

ಶ್ರೀ ಬಿ. ಹುಚ್ಚೇಗೌಡ.—ಹಾಗೆ ಅವರು ಹೇಳಿಲ್ಲ. ಆರೋಗ್ಯ ಮಂತ್ರಿಗಳೇ ಒಂದು ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಅದರಲ್ಲಿ ಹೇಳುತ್ತಾರೆ: "it has to be stated with regret that public co-operation is not forthcoming in this important matter to the extent required." ಅಂದರೆ ಸರ್ಕಾರದವರಿಗೆ ಮನಸ್ಸಿದೆಯೆಂದೂ, ಆದರೆ ಜನರು co-operate ಮಾಡುತ್ತಿಲ್ಲವೆಂದೂ ಹೇಳುತ್ತಿದ್ದಾರೆ. ಈ ಆಪಾದನೆಗೆ ಎಷ್ಟು ಜನ ಈ ಮಾನ್ಯ ಸಭೆಯ ಮಹನೀಯರು ಒಳಪಟ್ಟಿದ್ದಾರೆಂಬುದನ್ನು ಖಚಿತ ಗೊಳಿಸಲಿ ಎಂದು ನಾನು ಹೇಳುತ್ತೇನೆ. ಅಲ್ಲದೆ ಇದನ್ನು ನಾನು challenge ಕೂಡ ಮಾಡುತ್ತೇನೆ. ನಮ್ಮನ್ನೆ ಈ ರೀತಿಯಾಗಿ ಮನಸ್ಸಿಗೆ ಬಂದಂತೆ ಹೇಳಿಕೊಳ್ಳುವುದು ಸರಿಯಲ್ಲ. ಈ ಸಭೆಯಲ್ಲಿ ಪೂರ್ಣ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಬಹುಶಃ ಏಕಮತದಿಂದ ಹೇಳುತ್ತಿದ್ದೇವೆ; ಅನೇಕ ನಿರ್ಣಯಗಳನ್ನು ಕೂಡ ಮಾಡಿದ್ದೇವೆ. ಹಾಗಿದ್ದರೂ ಕೂಡ ಪಬ್ಲಿಕ್ ಕೋ-ಆಪರೇಷನ್ ಇಲ್ಲವೆಂದು ಹೇಳುತ್ತಿದ್ದಾರೆ. ವಾಸ್ತವವಾಗಿ ಹೇಳುವುದಾದರೆ, ಸರ್ಕಾರದವರು ಮತ್ತು ಸರ್ಕಾರದ ಅಧಿಕಾರಿಗಳೇ ಈ ರೀತಿ ಪಾನ ನಿರೋಧ ಯಶಸ್ವಿಯಾಗದಿರುವುದಕ್ಕೆ ಕಾರಣ. ಸರ್ಕಾರದವರು ಒಂದು ಕಡೆ ಕಂಟ್ರಾಕ್ಟರುಗಳ ಬೆನ್ನು ಚಪ್ಪರಿಸುತ್ತಿದ್ದಾರೆ; ಅವರಿಗೆ ಬೇಕಾದಹಾಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಅವರ ಅಧಿಕಾರಿಗಳೋ ಬೇಕಾದಷ್ಟು ಲಂಚ ರುಷುವತ್ತುಗಳನ್ನು ತೆಗೆದುಕೊಳ್ಳುತ್ತಾ ಮಾಮೂಲುಗಳನ್ನು ಮಾಡಿಕೊಂಡಿರುತ್ತಾರೆ. ಇಂಥ ಮಾಮೂಲುಗಳಿರುವುದನ್ನು ಅನೇಕವೇಳೆ ಸರ್ಕಾರದವರ ಗಮನಕ್ಕೆ ತಂದರೂ ಸರ್ಕಾರದವರು ಅದಕ್ಕೆ ಲಕ್ಷ್ಯ ಕೊಟ್ಟಿಲ್ಲ. ಒಂದು ಸಂದರ್ಭದಲ್ಲಿ ಕೈಗಾರಿಕಾ ಮಂತ್ರಿಗಳೇ ಹೇಳಿದ್ದಾರೆ: "ಅಧಿಕಾರಿಗಳು ಮಾಮೂಲು ಮಾಡಿಕೊಂಡು ಕಳ್ಳ ಬಟ್ಟಿ ಸಾರಾಯಿ ತಯಾರುಮಾಡಿ ಎದುರಿಗೇ ಮಾರುತ್ತಿದ್ದರೂ ನೋಡುತ್ತಿಲ್ಲ" ವೆಂದು ಹೇಳಿದ್ದಾರೆ.

ಅಧ್ಯಕ್ಷರು.—ಯಾವಾಗ?

ಶ್ರೀ ಬಿ. ಹುಚ್ಚೇಗೌಡ.—ನಮ್ಮ ಎದುರಿಗೆ ಹೇಳಿದ್ದಾರೆ. ಈ ರೀತಿ ಮಾಮೂಲುಗಳಿರುವುದು ಮಂತ್ರಿ ಪರ್ಯಂತರಿಗೂ ಕೂಡ ಗೊತ್ತಿದೆ. ಈ ಸಭೆಯಲ್ಲಿ ಯಾರೂ ಕೂಡ ವಿರೋಧ ಮಾಡುವುದಿಲ್ಲವೆಂಬುದೂ ಗೊತ್ತಿದೆ. ಹಾಗಿದ್ದರೂ ಸಾರ್ವಜನಿಕ ಸಹಕಾರವಿಲ್ಲ

(ಶ್ರೀ ಬಿ. ಹುಚ್ಚೇಗೌಡ.)

ವೆಂದು ಹೇಳಿ ಪಾನ ನಿರೋಧವನ್ನು ಮುಂದುವರಿಸುವುದಿಲ್ಲವೆಂದು ಹೇಳುವುದು ನಾಚಿಕೆಗೇಡು.

ಅಧ್ಯಕ್ಷರು.—ಕೆ. ಜಿ. ಎಫ್. ನಲ್ಲೆಲ್ಲಾ ಪಾನ ನಿರೋಧ ಬೇಡವೆಂದು ಹೇಳಿ ದೂಷಣೆ ಮಾಡುತ್ತಿದ್ದಾರೆಂದು ತಾವೇ ಹೇಳಿದರಲ್ಲ!

ಶ್ರೀ ಬಿ. ಹುಚ್ಚೇಗೌಡ.—ಹಾಗೇನಾದರೂ ಎಲ್ಲಾದರೂ ಒತ್ತಾಯಮಾಡಿ ನಿರ್ಣಯಮಾಡಿ ಕಳುಹಿಸಿದ್ದರೆ ಅಲ್ಲಿಗೆ ಕೊಡಿ. ನಂಸ್ಥಾನದಲ್ಲಿ ಸಾರ್ವಜನಿಕರ ಅಭಿಪ್ರಾಯ ಯಾವರೀತಿಯಿದೆ, ಈ ಸಭೆಯಲ್ಲಿ ಎಷ್ಟು ಜನ ಇದಕ್ಕೆ ಪರ ಮತ್ತು ವಿರೋಧವಾಗಿದ್ದಾರೆಂಬುದನ್ನು ತಿಳಿದು ನಾನು ಮಾತನಾಡುತ್ತಿದ್ದೇನೆ. ಯಾವುದೋ ಒಂದು ಕಡೆಯಲ್ಲಿ ಕೆಲವು ಜನ ಕೇಳಬಹುದು. ಕುಡಿಯುವವನು ಎಂದಿಗೂ ತಾನು ಕುಡಿತವನ್ನು ಬಿಡುವುದಿಲ್ಲವೆಂದು ಹೇಳುವುದು ಸಹಜ. ಆದ್ದರಿಂದ ಅಂಥವರ ಅಭಿಪ್ರಾಯವೇ ಪ್ರಾಧಾನ್ಯವೆಂದು ತೆಗೆದುಕೊಂಡು ಮಾಡುವುದಾದರೆ ಪ್ರಜಾಪ್ರಭುತ್ವದಲ್ಲಿ ಯಾವುದನ್ನೂ ತೀರ್ಮಾನಮಾಡುವುದಕ್ಕೇ ಆಗುವುದಿಲ್ಲ. ಉದಾಹರಣೆಗೆ ಎಸ್.ಆರ್.ಸಿ. ವರದಿಗೂ ವಿರೋಧ ಬಂತು. ಎಲ್ಲಾ ವಿರೋಧಕ್ಕೂ ಬೆಲೆ ಕೊಡುತ್ತಾ ಹೋದರೆ ಯಾವುದನ್ನೂ ಸಾಧಿಸುವುದಕ್ಕಾಗುವುದಿಲ್ಲ.

ನಮ್ಮ ದೇಶದಲ್ಲಿ 23 ಸಾವಿರ ಚದರ ಮೈಲಿಗಳು ಪಾನನಿರೋಧಕ್ಕೆ ಒಳಪಟ್ಟಿವೆ. ಅಂದರೆ 2/3 ಭಾಗ ದಷ್ಟು ಪ್ರದೇಶದಲ್ಲಿ ಪಾನನಿರೋಧ ಬಂದಿದೆ. ಆದರೆ consumption ಯಾವರೀತಿಯಿದೆಯೆಂದು ನೋಡುವುದಾದರೆ, Arrack 1953-54 ರಲ್ಲಿ 2,64,000 ಗ್ಯಾಲನ್‌ಗಳು ಖರ್ಚಾಗಿವೆ. 1954-55 ರಲ್ಲಿ 2,29,000 ಗ್ಯಾಲನ್‌ಗಳು ಖರ್ಚಾಗಿವೆ. ಎಂದಮೇಲೆ ಕುಡಿತ ಕಮ್ಮಿಯಾಗಿದೆಯೇ ಎಂಬುದನ್ನು ನೋಡಬಹುದು. ಹೆಚ್ಚಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆಯೇ ವಿನಾ ಕಡಿಯುವುದನ್ನು ಕಡಮೆ ಮಾಡುವುದಕ್ಕೆ ಪ್ರಯತ್ನಮಾಡುತ್ತಿಲ್ಲ. ಸರ್ಕಾರಕ್ಕೆ ಹಣ ಬರುತ್ತಿರುವುದು ಜಾಸ್ತಿಯಾಗುತ್ತಿರುವುದರ ಜೊತೆಗೆ ಕುಡಿಯುವುದೂ ಜಾಸ್ತಿಯಾಗಿರುವುದನ್ನು ಕಾಣಬಹುದು. ಅಫೀಮಿನ ಸೇವನೆಯ ಸಂಬಂಧವಾಗಿ ಅಂಕಿಅಂಶಗಳನ್ನು ತೆಗೆದುಕೊಂಡರೂ, ಅಂತರರಾಷ್ಟ್ರೀಯ ಒಪ್ಪಂದದಂತೆ ಅಫೀಮಿನ ಸೇವನೆಯನ್ನು ನಿಲ್ಲಿಸಬೇಕೆಂದಿದ್ದರೂ, ಅದರ ಸೇವನೆ ಕಡಮೆಯಾಗಿಲ್ಲ. 1959 ನೆಯ ಇಸವಿಗೆ ಪೂರ್ಣವಾಗಿ ನಿಲ್ಲಿಸಬೇಕೆಂದಿದೆ. 1944-45 ರಲ್ಲಿ 452 ಸೇರುಗಳಷ್ಟು ಖರ್ಚಾಗಿತ್ತು. ಈಗ ಹತ್ತು ವರ್ಷಗಳಾದಮೇಲೆ 1954-55ರಲ್ಲಿ 465 ಸೇರುಗಳು ಖರ್ಚಾಗಿವೆ. ಎಂದರೆ, ಹತ್ತು ವರ್ಷಗಳಲ್ಲಿ ಇನ್ನೂ ಇದರ ಸೇವನೆ ಜಾಸ್ತಿಯಾಗಿದೆ. ಇಂಡಿಯಾ ಸರ್ಕಾರದವರು ತಮ್ಮ ಒಪ್ಪಂದದ ಪ್ರಕಾರ 1959 ನೆಯ ಇಸವಿಗೆ ಪೂರ್ತಿ ನಿಲ್ಲಿಸಬೇಕೆಂದಿರುವಾಗ ಈ ರೀತಿ ನಡೆಯುತ್ತಿದ್ದರೆ ಇವರು ನಿಜವಾಗಿಯೂ ನುಡಿಯಂತೆ ನಡೆಯುತ್ತಾರೆಯೇ! ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ಈಚಲುವನಗಳನ್ನು ರಿಸರ್ವ್ ಮಾಡಿದ್ದೀರಿ. ಅನೇಕ ವರ್ಷಗಳಿಂದಲೂ ಈಚಲುವನಗಳನ್ನು ಬಿಟ್ಟು ಕೊಡಬೇಕೆಂದು ಕೇಳುತ್ತಲೇ ಇದ್ದೇವೆ. ಆದರೆ ಇಲ್ಲಿ ನೀವು ಕೊಟ್ಟಿರುವ ರಿಪೋರ್ಟಿನಲ್ಲಿ ಹೇಳಿದ್ದೀರಿ: "Agreeing with the recommendations of the Committee, the release of date groves, reserving only some lands with thick and contiguous growth, for use of department has been ordered" ಎಂದು ಮಾತ್ರ ಹೇಳಿದ್ದೀರಿ. ಇನ್ನೂ ಕೂಡ ಇಲಾಖೆಯವರು ಈ ಈಚಲುವನಗಳು ಬೇಕೆಂದು ಹೇಳಬೇಕಾದರೆ ಪಾನನಿರೋಧದ ವಿಚಾರದಲ್ಲಿ ನಿಮ್ಮ ಶ್ರದ್ಧೆಯೆಷ್ಟಿದೆಯೆಂಬುದನ್ನು ಹೇಳಬೇಕಾಗಿಲ್ಲ. ನಮ್ಮ ಕೇಳಿಕೆಗಳೆಲ್ಲಾ ಕೇವಲ ಅರಣ್ಯ ರೋದನವೆಂದೇ ಕಾಣುತ್ತದೆ. ಈ ಸಭೆಯ ಅಭಿಪ್ರಾಯಕ್ಕೆ ಧಿಕ್ಕಾರ ದೊರೆತಿದೆ. ಈ ಸಭೆಯ ಅಭಿಪ್ರಾಯದಂತೆ ಈ ಸರ್ಕಾರ ಯಾವುದನ್ನೂ ನಡೆಸುತ್ತಿಲ್ಲ. ಇವರು ಎಷ್ಟರಮಟ್ಟಿಗೆ ಮೀರಿ ನಡೆಯುತ್ತಿದ್ದಾರೆಂಬುದನ್ನು ಅಂಕಿಅಂಶಗಳನ್ನು ಕೊಟ್ಟು ಹೇಳಬಲ್ಲೆ. ಸರ್ಕಾರದವರು ಈ ರೀತಿಯಾಗಿ ಒಂದು ನೀತಿಯನ್ನು ಅನುಸರಿಸಿದಮೇಲೆ ಅದನ್ನು ಕಾರ್ಯಗತ ಮಾಡುವುದಕ್ಕೆ ಸಾರ್ವಜನಿಕರ ಸಹಕಾರವನ್ನು ಪಡೆಯುವುದಕ್ಕೆ ಬದಲಾಗಿ, ತಮ್ಮ ನೀತಿಗೆ ಸಾರ್ವಜನಿಕರ ಬೆಂಬಲ ಬರುತ್ತಿಲ್ಲವೆಂದು ಹೇಳಿಸುವ್ಯ ನಿರುವುದು ಶುದ್ಧ ಅನ್ಯಾಯ. ಸರ್ಕಾರದವರಿಗೆ ಮನಸ್ಸಿಲ್ಲವೆಂದು ಹೇಳಬೇಕು ಅಷ್ಟೆ. ಸಂಪೂರ್ಣವಾಗಿ ದೇಶಾದ್ಯಂತ ಪಾನನಿರೋಧ ಜಾರಿಗೆ ತರಬೇಕೆಂದು ನಮ್ಮ ಅಭಿಪ್ರಾಯವಾಗಿದ್ದರೂ, ಈ ನಿರ್ಣಯದ ಸೂಚಕರು ಒಂದು ಸಬ್-ಡಿವಿಜನ್ನಿನಲ್ಲಾದರೂ ತರಲೆಂದು ಹೇಳಿದ್ದಾರೆ. ಸರ್ಕಾರದವರಿಗೆ ಇದನ್ನೂ ಕೂಡ ಜಾರಿಗೆ ತರಬೇಕೆಂದು ಖಂಡಿತ ಮನಸ್ಸಿಲ್ಲ. ಈ ನಿರ್ಣಯದ ಉದ್ದೇಶ ಸಫಲವಾಗುವುದಿಲ್ಲ. ಆದರೂ ನಮ್ಮ ಕರ್ತವ್ಯ ದೃಷ್ಟಿಯಿಂದ ನಾವು ಈ ನಿರ್ಣಯಕ್ಕೆ ಬೆಂಬಲ ಕೊಡಬೇಕೆಂದು ತಿಳಿದು ಹೇಳುತ್ತಿದ್ದೇನೆ ಅಷ್ಟೆ.

1 P.M.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಶ್ರೀಮಾನ್ ರಾಚಯ್ಯನವರು ತಂದಿರುವ ಈ ನಿರ್ಣಯವನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಇದ್ದೇನೆ. ಮೈಸೂರು ಸಂಸ್ಥಾನದಲ್ಲಿ ಈ ಪಾನನಿರೋಧವನ್ನು ಜಾರಿಗೆ ತರಬೇಕೆಂಬ ಕಾರ್ಯಕ್ರಮವನ್ನು ಹಾಕಿಕೊಂಡು ಇಲ್ಲಿಗೆ ಸುಮಾರು ಆರೇಳು ವರ್ಷಗಳಾದವು. ಈ ಆರೇಳು ವರ್ಷ ಆಗಾಯ್ತು ಸುಮಾರು 5-5½ ಜಿಲ್ಲೆಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದು ಬಾಕಿ ಜಿಲ್ಲೆಗಳಲ್ಲಿ ಜಾರಿಗೆ ತರದೇ ಇರುವುದು ಬಹಳ ಶೋಚನೀಯವಾದದು ಮತ್ತು ಬಹಳ ಸಂಕಟದಿಂದ ಹೇಳಬೇಕಾಗಿದೆ. ಸರ್ಕಾರದ ಈ ಕಾರ್ಯ 'ತಿರುಪತಿ ಕ್ಷೌರ' ಇದ್ದ ಹಾಗೆ ಇದೆ. ಒಂದು ಕಡೆ ಇದರಿಂದ ಬರುತ್ತಿದ್ದ ಉತ್ಪತ್ತಿ ಕಡಿಮೆ ಆಯಿತು, ಇನ್ನೊಂದು ಕಡೆ ಕುಡಿತ ತಪ್ಪಲಿಲ್ಲ. ಅನೇಕಕಡೆ ಕಳ್ಳಭಟ್ಟಿ ಸಾರಾಯಿ ತಯಾರುಮಾಡಿ ವಿಶೇಷವಾಗಿ ಕುಡಿಯುತ್ತಾ ಇದ್ದಾರೆ. ನಮ್ಮ ಕಡೆ ಕಡೂರು ತಾಲ್ಲೂಕಿನಲ್ಲೂ ಕೂಡ. . . .

Sri B. T. KEMPARAJ (Bangalore South-Scheduled Castes).—On a point of order, Sir. The resolution pertains only to Nanjangud Sub-Division. I do not know how the Hon'ble Member can refer to Kadur District.

ಅಧ್ಯಕ್ಷರು.—ಶ್ರೀಮಾನ್ ಕೆಂಪರಾಜ್‌ರವರು ಹೇಳುವುದು ನಿಜ. ಈ ನಿರ್ಣಯದಲ್ಲಿ ತಿಳಿಸಿರುವುದಕ್ಕೆ ಸಂಬಂಧಪಟ್ಟಹಾಗೆ ಮಾತನಾಡಬಹುದೇ ಹೊರತು ಇತರ ವಿಷಯಗಳನ್ನು ಹೇಳುವುದಕ್ಕೆ ಅವಕಾಶವಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸರ್ಕಾರದವರು ಪಾನನಿರೋಧವನ್ನು ಜಾರಿಗೆ ತಂದಮೇಲೆ

ಅನೇಕಕಡೆ ಪಾನನಿರೋಧ ಮಾಡಿದ್ದಾರೆ. ಆದರೆ ಸಾಮಾನ್ಯವಾಗಿ, ನಾನು ಹೇಳಬೇಕೆಂದರೆ ಅಲ್ಲೂ ಕೂಡ ಯಾರು ಶ್ರೀಮಂತರಿದ್ದಾರೋ ಅವರ ಬಳಕೆಗೆ ಬಿಟ್ಟು ಇತರರು ಉಪಯೋಗ ಮಾಡುವ ಹೆಂಡ, ಸಾರಾಯಿ ಇತ್ಯಾದಿಗಳನ್ನು ನಿರೋಧಿಸಿದ್ದಾರೆ. ಇದರಿಂದ ಸುಮಾರು ಶೇಕಡ 70-75 ಕುಡಿಯುವವರ ಸಂಖ್ಯೆ ಜಾಸ್ತಿಯಾಗಿದೆ. ಉದಾಹರಣೆ ಹೇಳಬೇಕೆಂದರೆ, 17ನೇ ತಾರೀಖಿನ ದಿವಸ ಎಂದರೆ ಈ ಅಸೆಂಬ್ಲಿ ಪ್ರಾರಂಭವಾಗುವುದಕ್ಕೆ ಎರಡು ದಿನಗಳಿಗೆ ಮುಂಚೆ ಕಡೂರು ಟೌನಿನಲ್ಲಿ ಒಂದು ಘಟನೆ ಸಂಭವಿಸಿತು. ಅಲ್ಲಿ ಈ ರೀತಿ ಆಲ್ಕೋಹಾಲ್ ಮಿಶ್ರಿತವಾದ ಟಾನಿಕ್‌ಗಳನ್ನು ಮಾಡಲು ಅವಕಾಶ ಕೊಟ್ಟಿದ್ದಾರೆ. ರೂ. 1-1-0, ರೂ. 1-2-0ಗೆ ಒಂದು ಬಾಟಲ್ ಸಿಕ್ಕುತ್ತದೆ. ಅದನ್ನು ಯಾವನೋ ಒಬ್ಬ ಕುಡಿದು ನನ್ನಮೇಲೆ ಬಿದ್ದೇಬಿಟ್ಟ. ಆ ಕೂಡಲೇ ನಾನು ಪೋಲೀಸಿನವರಿಗೆ ತಿಳಿಸಿದೆ. ಸರ್ಕಾರದವರು ಪರ್ಮಿಷ್ ಕೊಟ್ಟಿದ್ದಾರೆ ಇಂಥ ಟಾನಿಕ್‌ಗಳನ್ನು ಮಾರುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಈ ರೀತಿ ಟಾನಿಕ್ ಕುಡಿದು ಮಾನ ಮರ್ಯಾದೆ ಎಲ್ಲ ಬಿಟ್ಟು ಮಾಡಬಾರದ ಕೆಲಸಗಳನ್ನು ಜನ ಮಾಡುತ್ತಾರೆ. ಇಂತಹ ಟಾನಿಕ್‌ಗಳನ್ನು ಮಾಡಲು ಅವಕಾಶ ಕೊಟ್ಟಿರತಕ್ಕ ಸರ್ಕಾರದಲ್ಲಿ ಎಷ್ಟುಬಿಗಿ ಇದೆ, ಯಾವರೀತಿ ಅವರು ಆಡಳಿತ ಮಾಡುತ್ತಾರೆ, ಇದರಲ್ಲಿ ಯಾವ ನ್ಯಾಯ ಇದೆ ಎಂಬುದನ್ನು ತಾವು ಯೋಚನೆಮಾಡಬೇಕು. ಕುಡಿಯದೇ ಇರುವವರೂ ಕುಡಿಯುವುದನ್ನು ಕಲಿತು ಕೊಂಡರು ಮತ್ತು ಸರ್ಕಾರಕ್ಕೆ ಬರುತ್ತಾ ಇದ್ದ ಉತ್ಪನ್ನ ಹೋಯಿತು. ಆಲ್ಕೋಹಾಲ್ ಶೇಕಡ 70-75 ಭಾಗ ಹಾಕಿದ ಟಾನಿಕ್‌ನ್ನು ಮಾರಲು ಅವಕಾಶ ಕೊಟ್ಟಮೇಲೆ ಹೆಂಡವನ್ನೇ ಏಕೆ ಮಾರಬಾರದು ಎಂದು ಕೇಳುತ್ತೇನೆ. ಮಾನ್ಯ ಮಂತ್ರಿಗಳಿಗೆ ಹೇಳಿದೆ; ಅವರು ವಿಚಾರಮಾಡುತ್ತೇನೆ ಎಂದು ಹೇಳಿದರು. ಆ ಟಾನಿಕ್ಕಿನ ಹೆಸರ ಅಶ್ವಾನಂದ ಟಾನಿಕ್ ಎಂದು. ಇದೇರೀತಿ ಇನ್ನೂ ಎರಡು ಮೂರು ಟಾನಿಕ್‌ಗಳಿಗೆ ಅವಕಾಶ ಕೊಟ್ಟಿದ್ದಾರೆ. ಸರ್ಕಾರದವರು ಕೂಡಲೇ ಇದನ್ನು ನಿಲ್ಲಿಸಬೇಕು. ಇಲ್ಲದೇ ಇದ್ದರೆ ನಮಗೆ ಶ್ರೇಯಸ್ಸು ಬರುವುದಿಲ್ಲ ಮತ್ತು ದೇಶಕ್ಕೆ ಬರುತ್ತಾ ಇದ್ದ ಉತ್ಪನ್ನವೂ ಕೂಡ ಹೊರಟು ಹೋಗುತ್ತದೆ. ಈ ಸರ್ಕಾರ ಬಂದಮೇಲೆ ಸಂಸ್ಥಾನದಲ್ಲೆಲ್ಲಾ ಪಾನ ನಿರೋಧವನ್ನು ಜಾರಿಗೆ ತರುತ್ತಾರೆ ಎಂದು ಅಂದು ಕೊಂಡಿದ್ದೆವು. ಅದಕ್ಕೆ ಬದಲಾಗಿ ಜಾರಿಮಾಡಿರ ತಕ್ಕ ಪ್ರದೇಶಗಳಲ್ಲೂ ಕೂಡ ಈ ರೀತಿ ಟಾನಿಕ್‌ಗಳಿಗೆ ಅವಕಾಶ ಕೊಟ್ಟಿರುವುದು ಬಹಳ ತೊಂದರೆಯಾಗಿದೆ. ಯಾವ ಒಂದು ಕಡೆಗೆ ಹೋದರೂ ಕಳ್ಳಭಟ್ಟಿ ಸಾರಾಯಿ ತಯಾರು ಮಾಡತಕ್ಕ ಮಡಕೆಗಳು ಸಿಕ್ಕಿಯೇ ಸಿಕ್ಕುತ್ತವೆ. ಅನೇಕಕಡೆ ಮಲೆನಾಡಿನಲ್ಲಿ--ಶ್ರೀಮತಿ ಸುಬ್ಬಮ್ಮ ನವರಿಗೆ ಗೊತ್ತಿರಬಹುದು—ಈ ತರಹ ಟಾನಿಕ್‌ಗಳನ್ನು ಕುಡಿಯುತ್ತಾ ಇದ್ದಾರೆ. ಕಡೂರಿನಲ್ಲಿ ಚುನಾವಣೆ ಆಯಿತು. ಆಗ ಸುಮಾರು 2½ ಸಾವಿರ ಬಾಟ್ಲ್ ಈ ಆಲ್ಕೋಹಾಲ್ ಟಾನಿಕ್ ಒಂದೇ ದಿವಸದಲ್ಲಿ ಖರ್ಚಾಯಿತು. ಈ ಟಾನಿಕ್ ಬಂದಮೇಲೆ ಮರ್ಯಾದಸ್ಥರಾದ ಯಾವ ಸದಸ್ಯರೇ ಆಗಲೀ ಟೌನ್ ಮುನಿಸಿಪಾಲಿಟಿಗೆ ಸದಸ್ಯರಾಗಿ ಚುನಾಯಿತರಾಗಿ ಬರಲು ಅವಕಾಶವಾಗಿಲ್ಲ. ಇಲ್ಲಿಗೆ ಬಂದಮೇಲೆ ಮೂರು ನಾಲ್ಕು ಕಡೆಗಳಲ್ಲಿ ಚುನಾವಣೆ ಆಗಿದೆ. ಎಲ್ಲ ಕಡೆಗಳಿಗೂ ಈ ಟಾನಿಕ್ಕನ್ನು ಲಾರಿಗಳಲ್ಲಿ ತೆಗೆದುಕೊಂಡು ಹೋಗುತ್ತಾರೆ, ಅಲ್ಲ ಹಂಚುತ್ತಾರೆ. ಆದ್ದರಿಂದ ಸರ್ಕಾರದವರು ದೊಡ್ಡ ಮನಸ್ಸುಮಾಡಿ ಮೈಸೂರು ಸಂಸ್ಥಾನದಲ್ಲಿ ಎಲ್ಲ ಕಡೆಗೂ ಈ ಪಾನನಿರೋಧವನ್ನು ಜಾರಿಗೆ ತಂದು ಇಂತಹ ಟಾನಿಕ್‌ಗಳಿಗೆ ಅವಕಾಶ ಕೊಡ ಕೊಡದೆಂದು ಹೇಳಿ ಈ ನಿರ್ಣಯವನ್ನು ಅನುಮೋದಿಸುತ್ತೇನೆ.

*Sri S. SRINIVASA IYENGAR (T.-Narsipur).—I beg to support the resolution moved by my friend Sri Rachiah. There are five taluks in the Nanjangud Sub-Division : they are T.-Narsipur, Yelandur, Chamarajanaga, Nanjangud and Gundlupet. These taluks—Gundlupet, Yelandur and T.-Narsipur are on the borders of the Madras State. On the other side of our border, *i.e.*, in the areas controlled by the Government of Madras, there is total prohibition. This side of that border is considered as wet area. So there is every possibility of these goods—arrack, toddy, opium and such other things—being smuggled into the other area. Why should we not introduce prohibi-tion here so that the dry districts of Madras and the border areas of Mysore State can as well be protected ?

Mr. SPEAKER.—Sales will be on the increase year by year ?

Sri S. SRINIVASA IYENGAR.—In Mysore State two-thirds of the areas are under prohibition and yet consumption is not reduced in accordance with that proportion.

Mr. SPEAKER.—In that particular region, because it borders on the dry area, I said.

Sri S. SRINIVASA IYENGAR.—Year by year auctions register increase and I can tell you that in T.-Narsipur Taluk on the broder we have got a place called Mudukatore where the biggest cattle fair in Mysore District is held. Huge sales of toddy and arrack are made in that District. People from the other side cross to these areas and indulge in drinking. The object of my friend Sri Rachiah is : why should we not protect our own people also ? On all the three sides you have a dry belt area and by rendering the areas of the Nanjangud Sub-Division dry, you can make prohibition effective not only in the areas of the Madras but also in the Mysore State. As it is, it is causing

(SRI S. SRINIVASA IYENGAR.)

great damage to us. As has been ably put by Sri Y. M. Chandrasekharaiah, during elections it causes a lot of damage. I have heard people drinking in unit called 'dara' arrack in the course of election. There will be arrack to be used either after ths elections or prior to that. Such evile can be put down and Government will not lose much revenue. After all, this question relates to a sub-division of the Mysore District. By accepting this resolution the Government will certainly have done a great good and have conferred a great boon on the people of that area. Poor people will be saved.

Secondly, Sir, the Government of Mysore is not serious in implementing their agreement. As has already been stated by Sri B. Hutche Gowda, under the Geneva Convention, the consumption must be reduced by eleven per cent every year so as to do away with it by the year 1959. But on the other hand, the opium consumption has registered an increase from the year 1944-45. Opium consumption in 1944 was of the order of 452 seers. To-day, after a period of ten years, in 1954-55 the opium consumption is of the order of 465 seers, registering an increase of 13 seers over the quantity consumed in the year 1944-45. All this time, the agreement entered into between the Government and the Geneva Convention was there. According to that agreement, it was their bounden duty to reduce the consumption by eleven per cent every year and yet consumption has registered an increase. It only shows that the Government is not serious about implementing their sacred agreement. On the other hand, they make such flimsy statement:

> "It is to be regretted that public co-operation in this important matter is not forthcoming to the extent required."

First let the Government keep their word. There is one interesting sentence on page 24 of the Brief Report on the working of the Departments of Medical, Public Health, Prohibition, Excise and Local Self-Government Departments issued by the Government of Mysore:

> "The ideal of complete prohibition has been written into the Constitution."

Government say it is written in the Constitution. We read the constitution. But Government does not seem to practice it properly. It is obligatory on the part of the Government to implement it according to the Directive Principles. It is not too late. They no doubt lose their revenue one day or the other. It is laid down in the Constitution and it is in the Directive Principles and therefore, Government have to undertake total Prohibition. Let them have the credit of introducing now alone. The question of finding alternative resources is a different thing. Let the Government take the primary step of introducing prohibition this year straightaway in Nanjangud Sub-Division. Secondly, let the Government pursue a policy of Prohibition as contained in the Constitution.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).— ಸ್ವಾಮಿ, ಈಗ ನಮ್ಮ ಮುಂದಿರತಕ್ಕ ಈ ತರಾವಿನ ವಿಚಾರದಲ್ಲಿ ನಂಜನಗೂಡು ಸಬ್ ಡಿವಿಜ಼ನಲ್ಲಿ ಪಾನ ನಿರೋಧವನ್ನು ಜಾರಿಗೆ ತರಬೇಕು ಎಂಬ ವಾದವನ್ನು ಮುಂದೆ ಇಟ್ಟು ಅದರ ಅವಶ್ಯಕತೆಯನ್ನು ಬಹಳ ಚೆನ್ನಾಗಿ ಸಮರ್ಥನೆ ಮಾಡಿದ್ದಾರೆ. ಅದು ಈ ಸಬ್ ಡಿವಿಜನ್ನಿಗೆ ಮಾತ್ರ ಅನ್ವಯಿಸತಕ್ಕ ವಿಚಾರವಲ್ಲ. ಈ ಸಂದರ್ಭದಲ್ಲಿ ದೇಶದ ಪಾನನಿರೋಧ ನೀತಿಯನ್ನು ಕುರಿತು ಮಾತನಾಡಿದ ಸದಸ್ಯರು ಅನೇಕರು ಈಗ ದೇಶಾದ್ಯಂತ ಒಂದೇಸಲ ಪಾನನಿರೋಧವನ್ನು ಜಾರಿಗೆ ತರಬೇಕಾದ ಅಗತ್ಯವಿದೆ ಎಂದು ವಾದ ಮಾಡಿದ್ದಾರೆ. ಈ ವಿಚಾರದಲ್ಲಿ ಇಂಡಿಯಾ ಸರ್ಕಾರ ದವರು ಅಗರ್‌ವಾಲಾ ಸಮಿತಿಯನ್ನು ನೇಮಕ ಮಾಡಿ ದರು. ಅವರು ಕೂಡ ಒಂದು ವರದಿಯನ್ನು ಒಪ್ಪಿಸಿ ದ್ದಾರೆ. ಅದರಲ್ಲಿ ಪಾನನಿರೋಧವನ್ನು ಕೂಡಲೇ ಜಾರಿಗೆತರಬೇಕು ಎಂದು ಹೇಳಿದ್ದಾರೆ. ಈ ಪಾನ ನಿರೋಧದ ವಿಚಾರದಲ್ಲಿ ಕಾಂಗ್ರೆಸ್ಸಿನವರು ತತ್ವತಃ ಇದನ್ನು ಒಪ್ಪಿಕೊಂಡಿದ್ದಾರೆ. ವಾಸ್ತವಿಕವಾಗಿ ನೋಡು ವುದಾದರೆ ಇದನ್ನು ಏಕಾಏಕಿ ಸಂಸ್ಥಾನಾದ್ಯಂತ, ಇಂಡಿಯಾ ದೇಶಾದ್ಯಂತ, ಜಾರಿಗೆ ತರಬೇಕೇ, ಬೇಡವೇ, ಎನ್ನುವ ವಿಚಾರದಲ್ಲಿ ಎರಡು ವಿಧವಾದ ವಾದಗಳಿವೆ. ಕೆಲವರು ಇದು ಕೂಡಲೇ ಆಗಬೇಕು ಎಂದು ಹೇಳುವ ವರೂ ಇದ್ದಾರೆ. ಮತ್ತೆ ಕೆಲವರು ಇದು ನಮ್ಮ ಸಾಧಾರಣ ಜನರ ಅಂತಸ್ತಿಗೆ ಅನ್ವಯಿಸಬೇಕಾದ್ದಲ್ಲ ಎಂದು ಹೇಳುತ್ತಾರೆ. ದೇಶದ ಭವಿಷ್ಯವನ್ನು ರೂಪು ಗೊಳಿಸತಕ್ಕ ದೊಡ್ಡ ದೊಡ್ಡ ಮುಖಂಡರೂ, economists, financial experts, ಇವರೆ ಲ್ಲರೂ ಕೂಡ ಇದರಲ್ಲಿ ಭಾಗಿಗಳಾಗಿ ಹಿಂದು ವಾದ ಹೇಳುತ್ತಿದ್ದಾರೆ. ಪಾನನಿರೋಧವನ್ನು ಎಲ್ಲ

ಕಡೆಯೂ ಒಂದೇ ಕಾಲದಲ್ಲಿ ಜಾರಿಗೆ ತರಬೇಕು ಎಂದು ಒಂದು ವಾದವಿದ್ದರೆ, ಇನ್ನೊಂದು ವಾದ, ಅಷ್ಟೇ ಬಲಯುತವಾದ ವಾದವೇನೆಂದರೆ, ಇದನ್ನು ಏಕಾಏಕಿ ಒಂದೇಸಾರಿ ಜಾರಿಗೆ ತರುವುದರಿಂದ ದೇಶಕ್ಕೆ ತೊಂದರೆಯಾಗುತ್ತದೆ, ದೇಶದ ಹಣಕಾಸಿನ ಸ್ಥಿತಿಗತಿಗಳನ್ನು ನೋಡಿಕೊಂಡು ಇದನ್ನು ಜಾಗಿಗೆ ತರಬೇಕು ಎಂದು ಹೇಳುತ್ತಾರೆ. ಕುಡಿಯುವುದರ ಕೆಟ್ಟ ಪರಿಣಾಮ ಜನತೆಯಮೇಲೆ ಆಗುತ್ತದೆ ಎಂಬ ವಿಷಯದಲ್ಲಿ ಸಂಶಯವಿಲ್ಲ. ಅದು ನಿರ್ವಿವಾದ ವಾದ ವಿಚಾರ. ತಾತ್ವಿಕವಾಗಿ ಅದನ್ನು ಎಲ್ಲರೂ ಒಪ್ಪುತ್ತಾರೆ. ನಿರ್ಣಯದಲ್ಲಿ ಇರತಕ್ಕ ತತ್ವವನ್ನು (spirit) ಜಾರಿಗೆ ತರಬೇಕು ಎಂದು ಅದರಲ್ಲಿ ಅಡಕವಾಗಿದೆ. ಅದನ್ನು ಕೂಡ ನಾನು ಒಪ್ಪುತ್ತೇನೆ. ಆದರೆ ಕೂಡಲೇ ನಂಜನಗೂಡು ಸಬ್ ಡಿವಿಜನ್‌ನಲ್ಲಿ ಜಾರಿಗೆ ತರಬೇಕು ಎಂದು ಹೇಳುತ್ತಿದ್ದಾರೆ. ಇದು ಒಂದು ತತ್ವವನ್ನು ಆಳವಡಿಸಿಕೊಂಡು ಬಂದಿರುವ ವಿಷಯವಾದದ್ದರಿಂದ ಇದರಲ್ಲಿ ಕೆಲವು ವಾಸ್ತವಾಂಶಗಳು ಏನಿವೆ ಎನ್ನುವುದನ್ನು ನಾವು ನೇರವಾಗಿ ನೋಡುವುದು ಒಳ್ಳೆಯದು. ನಾನು ಬರತಕ್ಕ ನ್ಯೂಳದಲ್ಲಿ ಪಾನ ನಿರೋಧ ಜಾರಿಯಲ್ಲಿಲ್ಲ. ಆದುದರಿಂದ ಪಾನನಿರೋಧ ವಿರುವಕಡೆ ಏನೇನು ಅನಾಹುತಗಳಾಗಿವೆ, ಕಳ್ಳಭಟ್ಟಿ ಸಾರಾಯಿ ತಯಾರಿಕೆ ಯಾವ ಮಟ್ಟದಲ್ಲಿದೆ ಮುಂತಾದ ವಿಷಯಗಳನ್ನು ತಿಳಿದುಕೊಳ್ಳಬೇಕು. ಶ್ರೀಮಾನ್ ಚಂದ್ರ ಶೇಖರಯ್ಯನವರು ಸಾರಾಯಿ ತಯಾರಿಕೆ ವಿಚಾರವನ್ನು ತಿಳಿಸಿ ಅದನ್ನು ಕುಡಿಯುವುದರಿಂದ ಚುನಾವಣೆಗೆ ಳಲ್ಲೂ ಕೂಡ, ಅದರ ಪ್ರಭಾವವನ್ನು ಯಾರು ಉಪಯೋಗಿಸಿಕೊಳ್ಳುತ್ತಾರೆಯೋ ಅವರೇ ಬರುವುದಕ್ಕೆ ದಾರಿಯಾಗಿದೆ ಎಂದು ಹೇಳಿದರು. ದೇಶದಲ್ಲಿ ಪಾನನಿರೋಧ ಜಾರಿಯಲ್ಲರುವ ಜಾಗಗಳಲ್ಲಿ ಈರೀತಿಯಾಗಿ ಕಳ್ಳಭಟ್ಟಿ ಸಾರಾಯಿ ತಯಾರಿಕೆ ವಿಪರೀತವಾಗಿದೆ ಮತ್ತು ಹಿಂದೆ ಕುಡಿಯುತಕ್ಕ ಜನರ ಸಂಖ್ಯೆ ಎಷ್ಟಿತ್ತೋ ಅದಕ್ಕಿಂತ ಎರಡು, ಮೂರರಷ್ಟು ಸಂಖ್ಯೆ ಜಾಸ್ತಿ ಕುಡಿಯುವುದನ್ನು ಹೊಸದಾಗಿ ಕಲಿತುಕೊಂಡಿದ್ದಾರೆ ಎಂದು ಹೇಳುತ್ತಿದ್ದಾರೆ. ಇನ್ನೊಂದು ಕಡೆ ಪಾನನಿರೋಧವನ್ನು ಜಾರಿಗೆ ತನ್ನಿ ಎಂದು ಒತ್ತಾಯಪಡಿಸುತ್ತಿದ್ದಾರೆ. ಇವೆರಡೂ ಸಮನ್ವಯವಾಗುತ್ತಿಲ್ಲ. ಪಾನನಿರೋಧವನ್ನು ಜಾರಿಗೆ ತರಬೇಕಾದರೆ ನಾನು ಹೇಳುವುದು ಇಷ್ಟೆ. ದೇಶದಲ್ಲಿ ಈಗ ಪಾನನಿರೋಧವನ್ನು ಎಲ್ಲೆಲ್ಲಿ ಜಾರಿಗೆ ತಂದಿದ್ದೀವೆಯೋ ಆ ಜಾಗಗಳಲ್ಲೆ ಅದು ಸಮರ್ಪಕವಾಗಿ ಕೆಲಸ ಮಾಡುತ್ತಿದೆಯೇ, ಇಲ್ಲವೇ ಎಂಬುದನ್ನು ನೋಡಬೇಕು. ಇದಕ್ಕೆ ಒಂದೇ ಮಾತಿನಲ್ಲಿ ನಾವು ಹೇಳುತ್ತೇವೆ, ಪೋಲೀಸಿನವರು ಸರಿಯಾದ ರೀತಿಯಲ್ಲ ಕೆಲಸಮಾಡದೆ ಇದ್ದರೆ, ಕಳ್ಳಭಟ್ಟಿ ಸಾರಾಯಿ ತಯಾರುಮಾಡತಕ್ಕದ್ದನ್ನು ನಾವು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಪೋಲೀಸಿನವರ ಮೇಲೆ ಸರಿಯಾದ ಹತೋಟಿಯನ್ನು ಇಟ್ಟಿರಬೇಕು. ಇನ್ನೂ ಒಂದು ವಿಚಾರವನ್ನು ಹೇಳುತ್ತೇನೆ. ಅದೇನೆಂದರೆ, ಉಗ್ರವಾದ ಶಿಕ್ಷೆಯನ್ನು ಕೊಟ್ಟಲ್ಲಿ ಅದೂ ಕೂಡ ಈ ಕಳ್ಳಭಟ್ಟಿ ಸಾರಾಯಿ ತಯಾರಿಕೆಯನ್ನು ನಿಲ್ಲಿಸುವುದಕ್ಕೆ ಒಂದು ಕಾರ್ಯಕ್ರಮವೆಂದು ಹೇಳುತ್ತೇನೆ.

ಸ್ವಾಮಿ, ಒಂದು ವಿಚಾರ ಮಾತ್ರ ನಮ್ಮ ಕೈಯಲ್ಲಿದೆ. ನಾವು ಉಗ್ರವಾದ ಶಿಕ್ಷೆ ಕೊಡುವುದಕ್ಕೆ ಕಾನೂನು ಮಾಡಬಹುದು. ಆದರೆ ಪೋಲೀಸಿನವರಿಂದ ಇದನ್ನು ತಪ್ಪಿಸುವುದಕ್ಕೆ ನರಿಯಾದ ಮಾರ್ಗಗಳನ್ನು (steps) ತೆಗೆದುಕೊಳ್ಳಬೇಕು. ಅವರನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು ಎಂದರೆ, ಅನುಭವಿಸಿ ನೋಡುವವರು ಹೇಳುವುದಾದರೆ, ಪೋಲೀಸಿನವರು ಅದನ್ನು ತಪ್ಪಿಸುವುದಕ್ಕೆ ಸಾಧ್ಯವೇ ಇಲ್ಲವೆಂದು ನಾನು ಭಾವಿಸುತ್ತೇನೆ. ಇದಕ್ಕೆ ಕಾರಣವಿಷ್ಟೆ. ಪೋಲೀಸಿನವರು ಕೂಡ ಅನೇಕರು ಈ ಕುಡಿಯತಕ್ಕ ಚಟವನ್ನು ಇಟ್ಟುಕೊಂಡಿದ್ದಾರೆ. ಜೊತೆಗೆ ಕುಡಿಯುವ ಅಭ್ಯಾಸವಿಲ್ಲದೆ ಇರುವವರು, ಸಾರಾಯಿ ತಯಾರಿಕೆ ಮಾಡುವವರಿಂದ ಹೊಂದತಕ್ಕ ಅನುಕೂಲತೆಗಳು ಬೇಕಾದಷ್ಟಿವೆ. ಅದರ ಜೊತೆಗೆ ಸಾರ್ವಜನಿಕರು ಅನೇಕರುಕೂಡ ಇದಕ್ಕೆ ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ ಸಹಾಯಕರಾಗಿದ್ದಾರೆ. ಈಗೆ ಇರುವ ಒಂದು ಸನಿ ವೇಶದಲ್ಲಿ, ಒಂದು ತಾಲ್ಲೂಕಿನಲ್ಲಿ ಬಹಳ ದಕ್ಷನಾದ ಮತ್ತು ಸತ್ಯವಂತನಾದ ಒಬ್ಬ ಇನ್‌ಸ್ಪೆಕ್ಟರನ್ನ ನೇಮಕ ಮಾಡಿದ್ದೇ ಆದರೆ ಆ ಇನ್‌ಸ್ಪೆಕ್ಟರು ತನ್ನ ಕೆಲಸಕಾರ್ಯಗಳನ್ನು ಮಾಡಬೇಕಾದರೆ ಅವನ ಕೈಕೆಳಗೆ ಇರುವ ಸಿಬ್ಬಂದಿಯ ಆಧಾರದಮೇಲೆ ಕೆಲಸ ಮಾಡಬೇಕು. ಒಬ್ಬನು ದಕ್ಷನಾಗಿದ್ದರೂ ಅವನ ಕೈಕೆಳಗೆ ಕೆಲಸಮಾಡುವ ಸಿಬ್ಬಂದಿ ಸರಿಯಾದ ಪ್ರೋತ್ಸಾಹ, ಬೆಂಬಲ ನೀಡದಿದ್ದರೆ ಅವನು ದೋಷ ದೋಷಗಳನ್ನು ನರಿಪಡಿಸಲು ಸಾಧ್ಯವಾಗುವುದಿಲ್ಲ. ಹಾಗಿರುವಾಗ ಇಡೀ ಪೋಲೀಸ್ ಇಲಾಖೆಯ ಎಲ್ಲ ಅಧಿಕಾರಿಗಳನ್ನೂ ಏಕದಂ ಬದಲಾಯಿಸಿ ಈ ನೀತಿಗನುಗುಣವಾಗಿ ನಾವು ಅಲ್ಲಿ ಬೇರೆ ಜನರನ್ನಿಡಲು ಸಾಧ್ಯವಿಲ್ಲ. ಒಂದುವೇಳೆ ಪೋಲೀಸ್ ಇಲಾಖೆಯನ್ನು ನಾವು ಬಹಳ ಚೆನ್ನಾಗಿ ರೀ-ಆರ್ಗನೈಜ್‌ಮಾಡಿ ಪಾನನಿರೋಧ ಕಾರ್ಯ ಜಯಪ್ರದವಾಗಿ ನಡೆಸುವಂತೆ ತರಪೇತು ಮಾಡಿದರೂ ಕೂಡ ಜನರಲ್ಲಿ ಅಂದರೆ ಕಾಂಗ್ರೆಸ್ಸಿನವರಲ್ಲಿ ಒಂದು ಆಸ್ಪ್ರಿಚ್ ಪಾಲಿಸಿ ಎಂದು ಹೇಳುವ ಮನೋಭಾವ ಬೆಳೆದುಬಂದಿದೆ. ಅದರಿಂದ ಉಪ್ಪು ಪಟ್ಟೆಯು ಮರಳು ಕಾಡಿನಲ್ಲಿ ಓಡಾಡುತ್ತಿರುವಾಗ ಶತ್ರುವು ಎದುರಿಗೆ ಬಂದರೆ ಎಲ್ಲೂ ಅಡಗಿಕೊಳ್ಳಲು ಅವಕಾಶ ಸಿಕ್ಕದೆ ಏನೂ ತೋಚದೆ ಅದು ಮರಳಿನಲ್ಲಿ ತಲೆಮರಸಿಕೊಂಡು ನುಮ್ಮನಿರುವ ಹಾಗೆ ನಮ್ಮಲ್ಲಿ ಅನೇಕರು ಆ ಮನೋಭಾವ ತಾಳಿದ್ದಾರೆ. ಇದರಿಂದ ಪಾನನಿರೋಧವು ಪ್ರಾರ್ಣವಾಗಿ ಜಯಪ್ರದವಾಗುತ್ತಿಲ್ಲ. ಹೀಗಾಗದಿರುವುದಕ್ಕೆ ತೊಂದರೆಯೇನು, ಅನಾನುಕೂಲವೇನು, ಅದನ್ನು ಹೋಗಲಾಡಿಸಲು ಯಾವರೀತಿ ನೀತಿಯನ್ನು ಬದಲಾಯಿಸಬೇಕು, ಪಾನನಿರೋಧ ಜಾರಿಗೆ ತರಬೇಕೆಂದಿರುವ ಉದ್ದೇಶವೇನಿದೆ ಅದನ್ನು ಸಾಧಿಸಬೇಕಾದರೆ ಬೇರೆ ವಿಧಾನದಲ್ಲಿ ಜಾರಿಗೆ ತರುವುದಕ್ಕೆ ಸಾಧ್ಯವೆ, ಎಂದು ಯೋಚನೆಮಾಡದೆ ನುಮ್ಮನೆ ಒಂದು ನೀತಿಯನ್ನನುಸರಿಸಿ ನಿರೋಧವನ್ನು ಜಾರಿಗೆ ತಂದು ಅವರ ಸಾಧಕಬಾಧಕಗಳನ್ನು ಗಮನಿಸದಿದ್ದರೆ ಪಾಸ್ತವವಾಗಿ ಇದರಿಂದ ಉತ್ತಮವಾದ ಪರಿಣಾಮವುಂಟಾಗದಿರುವುದೂ ಅಲ್ಲದೆ ಸರ್ಕಾರಕ್ಕೆ ಬರುವ ಉತ್ಪತ್ತಿಯೂ ಸಹ ಕಡಮೆಯಾಗುತ್ತದೆ. ನಮ್ಮ ಉದ್ದೇಶ ನೆರವೇರುತ್ತಿಲ್ಲ. ಸರ್ಕಾರಕ್ಕೆ ಬರುವ ಉತ್ಪತ್ತಿ ಕಡಮೆಯಾದರೂ ಆಗಲಿ ಪಾನನಿರೋಧವನ್ನು ಜಾರಿಗೆತರೋಣ ಎಂಬುದು ನಮ್ಮ ಉದ್ದೇಶವಲ್ಲ. ಜನರು ಕುಡಿದು ಹಾಳಾಗುತ್ತಿದ್ದಾರೆ, ಆರ್ಥಿಕವಾಗಿ, ನೈತಿಕವಾಗಿ ಕೆಟ್ಟುಹೋಗುತ್ತಿದ್ದಾರೆ, ಇದನ್ನು ಜಾರಿಗೆತಂದರೆ ಅವರೆಲ್ಲಾ ಉದ್ಧಾರವಾಗುತ್ತಾರೆ ಎಂಬ ಅಭಿಪ್ರಾಯದಿಂದ ಇದನ್ನು ತಂದಿರುವುದು. ಆದರೆ ಪರಿಣಾಮದಲ್ಲಿ ಸರ್ಕಾರದ ಉತ್ಪತ್ತಿಯೊಂದು ಕಡಮೆಯಾಗಿದೆಯೇ ಏನಾ ಯಾವ ಉದ್ದೇಶವಿದೆಯೋ ಅದು ನೆರವೇರಲಲ್ಲ; ತದ್ವಿರುದ್ಧವಾಗಿ ಹಿಂದೆ ಕುಡಿಯುತ್ತಿದ್ದವರ ಜೊತೆಗೆ ಇನ್ನೂ ಅನೇಕರು ಕುಡಿಯುತ್ತಿದ್ದಾರೆ. ಹಾಗಿರುವಾಗ ನಾವು ನುಮ್ಮನೆ ಕಣ್ಣುಮುಚ್ಚಿಕೊಂಡು ಜಾರಿಗೆ ತಂದ

(ಶ್ರೀ ಡಿ. ದೇವರಾಜ ಅರಸ್.)

ಮಾತ್ರಕ್ಕೆ ಅದರಿಂದ ಸ್ವರ್ಗವನ್ನು ಇಲ್ಲಿಗೆ ಇಳಿಸಿದ ಹಾಗಾಗುವುದಿಲ್ಲ. ಇದಕ್ಕಾಗಿ ನಮ್ಮ ದೇಶದಲ್ಲಿ ಈಗ ನಾವು ಪಾನನಿರೋಧವನ್ನು ಜಾರಿಗೆ ತಂದಿರುವ ಸ್ಥಳದಲ್ಲಿ ಅದು ಯಾವರೀತಿ ಕೆಲಸ ಮಾಡುತ್ತಿದೆ, ತೊಂದರೆಯೇನಿದೆ ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸಲು ಒಂದು ಸಮಿತಿಯನ್ನು ನೇಮಕಮಾಡಿ ಆ ಸಮಿತಿ ತೀರ್ಮಾನ ಮಾಡುವುದನ್ನು ಒಪ್ಪಿಕೊಳ್ಳೋಣ. ಅದನ್ನು ತಿಳಿದುಕೊಂಡು ಈಗಿರುವ ಕ್ರಮವನ್ನು ಅನುಸರಿಸಿ ಪಾನನಿರೋಧ ಜಾರಿಗೆ ತರುವುದು ಒಳ್ಳೆಯದೆ ಅಥವಾ ಬೇರೆ ಮಾರ್ಗವನ್ನು ಅನುಸರಿಸಿ ಜಾರಿಗೆ ತರಲು ಸಾಧ್ಯವೆ, ಸಾಧಕಬಾಧಕಗಳೇನು ಎಂಬುದನ್ನೆಲ್ಲಾ ವಿಮರ್ಶೆ ಮಾಡಿ ಒಂದು ನಿರ್ಧಾರಕ್ಕೆ ಬಂದು ಅದರಂತೆ ಮಾಡಬೇಕೇ ವಿನಾ ನಮ್ಮನೆ ಹಳ್ಳಿಯಲ್ಲಿ ಅಪ್ಪ ಹಾಕಿದ ಆಲದ ಮರ ಎಂದು ಗಾದೆ ಹೇಳುವಂತೆ ಅದಕ್ಕೆ ನೇತುಹಾಕಿಕೊಂಡರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಆ ರೀತಿ ಮಾಡಿ ಈಗಲೇ ಜಾರಿಗೆ ತರಬೇಕೆ, ಬೇಡವೆ ಎಂಬುದನ್ನು ಯೋಚಿಸಿ ನಿಧಾನವಾಗಿ ಜಾರಿಗೆ ತರುವುದು ಒಳ್ಳೆಯದು ಎಂಬುದು ನನ್ನ ಸಲಹೆ.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ರಕ್ಷಣೆ ಮತ್ತು ಸ್ಥಳೀಯ ಪ್ರಜಾಧಿಕಾರ ಶಾಖೆಯ ಮಂತ್ರಿಗಳು).—ಸ್ವಾಮಿ, ನಂಜನಗೂಡು ನಬ್‌ಡಿವಿಜ್ಞ್ ಪ್ರದೇಶದಲ್ಲಿ ಪಾನನಿರೋಧ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದು ಶ್ರೀಮಾನ್ ರಾಚಯ್ಯನವರು ಈ ಸಭೆಯ ಮುಂದೆ ಒಂದು ನಿರ್ಣಯವನ್ನು ಮಂಡಿಸಿದ್ದಾರೆ. ಈ ಸಭೆ ಅನೇಕವೇಳೆ ಪಾನನಿರೋಧದ ಅನುಕೂಲಗಳು ಮತ್ತು ಅನಾನುಕೂಲಗಳ ವಿಷಯದಲ್ಲಿ ಬಹಳವಾಗಿ ಚರ್ಚೆ ನಡೆಸಿದೆ. ಹಿಂದೆ ನಾನು ಹೇಳಿದ ವಿಷಯಗಳನ್ನು ಮತ್ತೊಮ್ಮೆ ನಾನು ವಿಶದವಾಗಿ ಈ ಮಾನ್ಯ ಸಭೆಯ ಮುಂದೆ ಹೇಳಲು ಇಚ್ಛೆಪಡುವುದಿಲ್ಲ. ಎಲ್ಲ ಮಾನ್ಯ ಸದಸ್ಯರಿಗೂ ಆ ವಿಷಯಗಳು ಗೊತ್ತಿವೆ. ಆದರೆ ಮುಖ್ಯವಾಗಿ ಈಗ ನಂಜನಗೂಡು ನಬ ಡಿವಿಜ್ಞನಲ್ಲಿ ಪಾನನಿರೋಧ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದು ಮಾನ್ಯ ಸದಸ್ಯರು ತಂದಿರುವ ನಿರ್ಣಯದ ವಿಚಾರದಲ್ಲಿ ಸರ್ಕಾರದ ಸಹಾನುಭೂತಿಯೇನೋ ಇದ್ದೇ ಇದೆ. ಈಗಾಗಲೇ ಸರ್ಕಾರದವರು ಪಾನನಿರೋಧ ಜಾರಿಗೆ ತಂದಕಾಲದಲ್ಲಿ 1918ನೆಯ ಇಸವಿಯಲ್ಲಿ ಮದರಾಸು ಬಾರ್ಡರಿನಲ್ಲಿರುವ ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಐದು ಮೈಲಿಗಳ ಪ್ರದೇಶದಲ್ಲಿ ಮದರಾಸು ಬಾರ್ಡರಿನ ಸುತ್ತಲೂ ಡ್ರೈಬೆಲ್ಟ್ ಮಾಡಬೇಕೆಂದು ತೀರ್ಮಾನ ಮಾಡಿದ್ದರು. ಇದಕ್ಕೆ ಮೊದಲು 1938ರಲ್ಲಿ ರಾಮನಗರ ಮತ್ತು ಚನ್ನಪಟ್ಟಣವನ್ನಲ್ಲಿ ಮಾತ್ರ ನಿರೋಧ ಮಾಡಿದ್ದರು. ನಂಜನಗೂಡು ಪ್ರದೇಶದಲ್ಲೂ ಮದರಾಸು ಪ್ರಾಂತದ ಬಾರ್ಡರಿನಲ್ಲಿ ನುಮಾರು ಐದು ಮೈಲಿ ಫಾಸಲೆ ದೂರದಲ್ಲಿ ಹೆಂಡ, ಸಾರಾಯಿ ಅಂಗಡಿಗಳನ್ನೆರೆ ಮಾರಕೂಡದೆಂದು ಸರ್ಕಾರದವರು ಕಟ್ಟು ಮಾಡಿದ್ದಾರೆ. ತಮ್ಮೆಲ್ಲರಿಗೂ ಒದಗಿಸಿರುವ ಸಂಕ್ಷೇಪವಾದ ವರದಿಯಲ್ಲಿ ಕೆಲವು ವಿಷಯಗಳನ್ನು ತಿಳಿಸಿದ್ದೇವೆ. ಸರ್ಕಾರದ ತೊಂದರೆಯೇನಿದೆಯೆಂಬುದನ್ನು ಕೂಡ ತಿಳಿಸಿದ್ದೇವೆ.

ಶ್ರೀ ಬಿ. ರಾಚಯ್ಯ.—ಐದು ಮೈಲಿ ಪ್ರದೇಶದಲ್ಲಲ್ಲ ಅಂಗಡಿ ತೆಗೆಯಬೇಕೆಂದು ಆರ್ಡರು ಮಾಡಿದ್ದೇವೆಂದು ಹೇಳಿರುವುದು ತಪ್ಪು.

ಶ್ರೀ ಟಿ. ಚನ್ನಯ್ಯ.—ಸರ್ಕಾರದವರು ಆ ರೀತಿ ಆರ್ಡರು ಮಾಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಒಂದೆರಡು ಸ್ಥಳಗಳಲ್ಲಿ ಆ ರೀತಿ ನಡೆಯದಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪೋಲೀಸ್ ಸಿಬ್ಬಂದಿಯಿದೆ. ಅವರು ಅಕ್ರಮವಾಗಿ ಮಾರಾಟ ಮಾಡುವ ಸಂದರ್ಭಗಳಿದ್ದರೆ ಕಂಡುಹಿಡಿದು ಶಿಕ್ಷೆಗೆ ಗುರಿಪಡಿಸುತ್ತಾರೆ.

1-30 P.M.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಗಡಿ ಸರಹದ್ದಿನಲ್ಲಿ ಐದು ಮೈಲಿ ಪಾನರೆಯೊಳಗೆ ಎಲ್ಲಿಯೂ ಅಂಗಡಿಗಳಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಸ್ವಾಮಿ, ಈ ಪಾನನಿರೋಧದ ವಿಷಯದಲ್ಲಿ ಸರ್ಕಾರದವರಿಗೂ ಬಹಳ ಸಹಾನುಭೂತಿಯಿದೆ. ಆದಷ್ಟು ಜಾಗ್ರತೆ ಇದಕ್ಕೊಂದು ಮನ್ನಣೆಯನ್ನು ಕೊಟ್ಟು ಇದನ್ನು ಸಂಸ್ಥಾನಾದ್ಯಂತವೂ ಜಾರಿಗೆ ಆದಷ್ಟು ಬೇಗ ತರಬೇಕೆಂಬ ಅಭಿಲಾಷೆ ಸರ್ಕಾರಕ್ಕಿದೆ. ಇತ್ತೀಚೆಗೆ ಆ ಇಂಡಿಯಾ ಸರ್ಕಾರದಿಂದ ನೇಮಕವಾದ ಪ್ಲಾನಿಂಗ್ ಸಮಿತಿಯವರು ಈಬಗ್ಗೆ ಒಂದು ಎಕ್ಸ್‌ಪೈರಿ ಸಮಿತಿಯನ್ನು ನೇಮಕ ಮಾಡಿದ್ದರು. ಆ ಸಮಿತಿಯವರ ಕೆಲವು ಸಲಹೆಗಳನ್ನೂ, ಮತ್ತು ಶಿಫಾರ್ಸುಗಳನ್ನೂ ಸಂಸ್ಥಾನ ಸರ್ಕಾರಗಳಿಗೆ ಕಳುಹಿಸಿರುತ್ತಾರೆ. ಆ ಶಿಫಾರ್ಸುಗಳನ್ನು ಮೈಸೂರು ಸರ್ಕಾರದವರು ಈಗ ಪರಿಶೀಲನೆ ಮಾಡುತ್ತಿದ್ದಾರೆ. ಈ ಪಾನನಿರೋಧವನ್ನು ನಮ್ಮ ಸಂಸ್ಥಾನದಲ್ಲಿ ಸಂಪೂರ್ಣವಾಗಿ ಜಾರಿಗೆ ತರಬಹುದೆಂಬ ನಂಬಿಕೆ ನಮಗಿದೆ. ಆದರೆ ನಮ್ಮ ಸರ್ಕಾರ ಈ ಹೊತ್ತು ಆ ಕೇಂದ್ರದ ಪ್ಲಾನಿಂಗ್ ಸಮಿತಿಯವರ ಸಲಹೆಗಳಿಗನುಸಾರವಾಗಿ ಕಾರ್ಯಕ್ರಮವನ್ನು ಕೈಗೊಂಡ ಪಕ್ಷದಲ್ಲಿ ನಮ್ಮ ಸರ್ಕಾರಕ್ಕೆ ಈ ದಿವಸ ಈ ಬಾಬಿನಿಂದ ವರ್ಷಂಪ್ರತಿ ಬರುತ್ತಿರುವಂಥ ಒಂದೂಮುಕ್ಕಾಲು—ಎರಡುಕೋಟಿ ರೂಪಾಯಿಗಳು ಲುಕ್ಸಾನಾಗುತ್ತದೆ. ಈ ಲುಕ್ಸಾನನ್ನು ಆ ಕೇಂದ್ರ ಸಮಿತಿಯವರು ಭರ್ತಿಮಾಡಿಕೊಡುವುದಾದರೆ ನಾವು ಈ ತಕ್ಷಣವೇ ಈ ಪಾನನಿರೋಧವನ್ನು ದೇಶಾದ್ಯಂತವೂ ಜಾರಿಗೆ ತರಲು ಸಿದ್ಧವಾಗಿದ್ದೇವೆ. ಇದೇ ಅಭಿಪ್ರಾಯವನ್ನು ನಾವೀಗ ಆ ಸಮಿತಿಯವರಿಗೆ ಬರೆದು ಕಳುಹಿಸಿದ್ದೇವೆ. ಆದರೆ ಅವರಿಂದ ನಮಗಿನ್ನೂ ಯಾವ ಉತ್ತರವೂ ಬಂದಿಲ್ಲ. ಹಾಗೊಂದುವೇಳೆ ಆ ಸಮಿತಿಯವರು ಪೆಟ್ರಲ್ ರಿಸೋರ್ಸಸ್ ಫಂಡಿನಿಂದ ನಮಗಿದರಿಂದ ಉಂಟಾಗುವ ಲುಕ್ಸಾನನ್ನು ಕೊಡಿಸಿಕೊಡುವ ಪಕ್ಷಕ್ಕೆ ನಾವು ಆದಷ್ಟು ಬೇಗ ಈ ಪಾನನಿರೋಧವನ್ನು ಸಂಸ್ಥಾನಾದ್ಯಂತವೂ ಜಾರಿಗೆ ತರಲು ಕೂಡಲೇ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ. ಆದರೆ ಇದನ್ನು ನಾನು ಈಗಾಗಲೇ ತಿಳಿಸಿರುವಂತೆ ಕೂಡಲೇ ಜಾರಿಗೆ ತರಲು ಅನೇಕ ತೊಂದರೆಗಳಿವೆ; ಕಷ್ಟನಷ್ಟಗಳೂ ಇವೆ. ಹೀಗೆ ಇದರ ಸಾಧಕ ಬಾಧಕಗಳನ್ನು ಪರಿಶೀಲನೆ ಮಾಡದೆ ಮುಂದುವರಿಯುವುದು ಬಹಳ ಅಪಾಯಕರ. ಇಷ್ಟೆಲ್ಲಾ ತೊಂದರೆಗಳಿದ್ದಾಗ್ಯೂ ನಮ್ಮ ಮೈಸೂರು ಸರ್ಕಾರ ಈಗಾಗಲೇ ಈಬಗ್ಗೆ ಸಾಕಷ್ಟು ಕಾರ್ಯಕ್ರಮಗಳನ್ನು ಕೈಗೊಂಡು ಸಂಸ್ಥಾನದ ನಾನಾ ಭಾಗಗಳಲ್ಲಿ ಈ ಪಾನನಿರೋಧ ಪನ್ನಾಗವೇ ಜಾರಿಗೆ ತಂದಿದೆ. ಆದರೆ ಈಗ ಸಂಸ್ಥಾನದಲ್ಲಿ ಎಲ್ಲೆಲ್ಲಿ ಈ ಪಾನನಿರೋಧ ಜಾರಿಯಲ್ಲಿದೆಯೋ ಅಲ್ಲಿ ಹಾಗೊಂದುವೇಳೆ ಯಾರಾದರೂ ಅಕ್ರಮವಾಗಿ ಕಳ್ಳಬಟ್ಟಿ ಸಾರಾಯಿ ಇತ್ಯಾದಿಗಳನ್ನು ತಯಾರಿಸುತ್ತಿದ್ದರೆ—ಅಂಥಾದ್ದನ್ನು ಯಾರಾದರೂ ಸರ್ಕಾರದವರ ಗಮನಕ್ಕೆ ತಂದರೆ ಅದನ್ನು ತಡೆಗಟ್ಟಲು ಸರ್ಕಾರದವರು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲು ಯಾವತ್ತೂ ಸಿದ್ಧವಾಗಿದ್ದಾರೆ. ಈ ಪಾನನಿರೋಧವನ್ನು ಆದಷ್ಟು ಬೇಗ ಪ್ರದೇಶದಲ್ಲಿ ಜಾರಿಗೆ ತರಬೇಕೆಂಬ

ನಹಾನುಭೂತಿ ಸರ್ಕಾರದವರಿಗಿದೆ. ನಾವು ಈಗಾಗಲೇ ಕಳುಹಿಸಿರುವ ಉತ್ತರಕ್ಕೆ ನಮಗೆ ಆ ಕೇಂದ್ರ ಪ್ಲಾನಿಂಗ್ ಸಮಿತಿಯವರಿಂದ ಭರವಸೆಕೊಡುವಂಥ ಒಂದು ಉತ್ತರ ಬಂದರೆ ನಾವು ಇದನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರುತ್ತೇವೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನಾದ್ದರಿಂದ ತಾವು ಈ ನಿರ್ಣಯವನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—What does the Hon'ble Member say ?

ಶ್ರೀ ಬಿ. ರಾಚಯ್ಯ.—ಮಾನ್ಯ ಮಂತ್ರಿಗಳು ಈ ನಿರ್ಣಯದ ಬಗ್ಗೆ ಅವರ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿರುವುದರಿಂದ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿಯನ್ನು ಬೇಡುತ್ತೇನೆ.

*The Resolution was by leave withdrawn.*

---

## No. (2) Appointment of a Harijan Member to the Mysore Public Service Commission.

Sri R. MUNISWAMIAH (Bangalore North—Scheduled Castes).—My resolution reads like this:

> "This Assembly is of the opinion that a Harijan member be appointed immediately to the Mysore Public Service Commission."

I am placing this resolution before this House with the hope of getting hearty support and approval to this important resolution. This resolution is very important because it concerns particularly the Harijans who form one-fifth of the population of our State.

ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ಆರ್ಟಿಕಲ್ 315, 316 ಮತ್ತು 318ರ ಪ್ರಕಾರ ದೇಶದಲ್ಲಿ ಒಂದು ಪಬ್ಲಿಕ್ ಸರ್ವೀಸ್ ಕಮಿಷನ್ನನ್ನು ಸ್ಥಾಪನೆ ಮಾಡಬೇಕೆಂಬ ವಿಚಾರವನ್ನು ತಿಳಿಸಲಾಗಿದೆ. ಈ ವಿಧಿಗಳಲ್ಲಿ ಆ ಕಮಿಷನ್ನಲ್ಲಿ ಎಷ್ಟು ಜನ ಸದಸ್ಯರಿರಬೇಕು, ಎಷ್ಟು ಜನರು ಥೇರ್ಮನ್ನರು ಇರಬೇಕು ಎಂಬ ಅಂಶಗಳನ್ನೆಲ್ಲಾ ನಿರೂಪಣೆ ಮಾಡಿದ್ದಾರೆ. 1950ರಲ್ಲಿ ಈ ವಿಧಿಗಳಿಗನುಗುಣವಾಗಿ ನಮ್ಮ ರಾಜಪ್ರಮುಖರವರು ನಮ್ಮ ಸಂಸ್ಥಾನದಲ್ಲಿ ಒಂದು ಪಬ್ಲಿಕ್ ಸರ್ವೀಸ್ ಕಮಿಷನ್ನನ್ನೂ ಮತ್ತು ಅದಕ್ಕೆ ಸಂಬಂಧಪಟ್ಟ ಒಂದು ರೆಗ್ಯುಲೇಷನ್ನನ್ನೂ ನಿರೂಪಣೆ ಮಾಡಿದರು. ಅದಕ್ಕನುಸಾರವಾಗಿ ಆ ಸಂಸ್ಥೆಗೆ ಒಬ್ಬರು ಥೇರ್ಮನ್ನರನ್ನು ಮತ್ತು ಎರಡು ಜನ ಸದಸ್ಯರುಗಳನ್ನೂ ನೇಮಕ ಮಾಡಿದರು. ಈಗ ಹೀಗೆ ನೇಮಕಮಾಡಿರುವ ಸದಸ್ಯರುಗಳನ್ನು ನೋಡಿದರೆ ನಮ್ಮ ದೇಶದಲ್ಲಿ ಪ್ರಾಮುಖ್ಯತೆಯನ್ನು ಪಡೆದಿರತಕ್ಕಂಥ ಎರಡು ಪಂಗಡಗಳವರಿಗೆ ಮಾತ್ರವೇ ಇದರಲ್ಲಿ ಪ್ರಾತಿನಿಧ್ಯ ದೊರೆಕಿಸಿಕೊಟ್ಟಿರುವ ಹಾಗೆ ಕಾಣಿಸುತ್ತಿದೆ. ಹೀಗೇ ನಾವು ಇನ್ನೂ ಮುಂದೆ ಹೋಗಿ ನೋಡುವುದಾದರೆ ಈ ಎರಡು ಕೋಮುಗಳಷ್ಟೇ ಮೆಜಾರಿಟಿ ಇರತಕ್ಕಂಥ ಹರಿಜನ ಜನಾಂಗದವರಿಗೊಂದು ಸ್ಥಾನವನ್ನು ಇದರಲ್ಲಿ ಕೊಡಬೇಕೆಂಬ ವಿಚಾರದಲ್ಲಿ ತಾತ್ಸಾರ ಮಾಡಿದ್ದಾರೆಂದು ಹೇಳ ಬಯಸುತ್ತೇನೆ. ಹೀಗೆ ಒಬ್ಬ ಹರಿಜನ ಸದಸ್ಯರನ್ನು ಇದಕ್ಕೆ ಸರ್ಕಾರದವರು ನೇಮಕ ಮಾಡದೆ ಹೋಗಿರುವುದರಿಂದ ದೇಶದಲ್ಲಿರತಕ್ಕ ಹರಿಜನ ಜನಾಂಗದವರಿಗೆ ಬಹಳಮಟ್ಟಿಗೆ ಈ ಸರ್ಕಾರಿ ಉದ್ಯೋಗಗಳ ಬಗ್ಗೆ ನ್ಯಾಯವಾಗಿ ಅವರಿಗೆ ದೊರಕಬೇಕಾಗಿದ್ದ ಸ್ಥಾನಗಳು ದೊರಕದೆ ಇವರಿಗೆ ಸ್ವಲ್ಪಮಟ್ಟಿಗೆ ಕುಂದುಕೊರತೆಯುಂಟಾಗಿದೆಯೆಂದು ಹೇಳುತ್ತೇನೆ. ಈ ಹಿಂದೆ ಈಗಿರತಕ್ಕ ಪಬ್ಲಿಕ್ ಸರ್ವೀಸ್ ಕಮಿಷನ್ನನ್ನು ಸ್ಥಾಪಿಸುವುದಕ್ಕೆ ಮುಂಚೆ ನಮ್ಮ ಸಂಸ್ಥಾನದಲ್ಲಿ ಸೆಂಟ್ರಲ್ ರೆಕ್ರೂಟಿಂಗ್ ಮೆಂಟ್ ಬೋರ್ಡ್ ಎಂಬುದಾಗಿ ಒಂದು ಬೋರ್ಡಿತ್ತು. ಆಗ್ಗೆ ಆ ಬೋರ್ಡಿಗೆ ಒಬ್ಬ ಹರಿಜನ ಸದಸ್ಯರನ್ನು ತೆಗೆದುಕೊಂಡಿದ್ದರು. ಆಗ ಸರ್ಕಾರಿ ಉದ್ಯೋಗಗಳ ಬಗ್ಗೆ ಹರಿಜನ ಜನಾಂಗದವರಿಗೆ ಯಾವ ಅನ್ಯಾಯಗಳೂ ಆಗದ ಇರುವಂತೆ ಅವರು ನೋಡಿಕೊಳ್ಳುತ್ತಿದ್ದರು. ಆದರೆ ಈಗಿನ ವ್ಯವಸ್ಥೆಯಲ್ಲಿ ಕೂಡ ಅಂಥ ಒಂದು ಪದ್ಧತಿಯನ್ನು ಅನುಸರಿಸದಿರುವುದು ಈ ಜನಾಂಗದವರ ದುರದೃಷ್ಟವೆಂದು ನಾನು ಭಾವಿಸುತ್ತೇನೆ. ಹೀಗೆ ಒಬ್ಬ ಹರಿಜನ ಸದಸ್ಯರು ಈ ಡಿವನ P.S.C. ಯಲ್ಲಿಲ್ಲದೆ ಇರುವುದರಿಂದ ಇವರಿಗೆ ಅನೇಕ ತೊಂದರೆಗಳು ಒದಗಿರುತ್ತವೆ. ಸರ್ಕಾರಿ ಉದ್ಯೋಗಗಳಲ್ಲಿ ಇವರಿಗೆ ನ್ಯಾಯವಾಗಿ ದೊರೆಯಬೇಕಾಗಿದ್ದವುಗಳೂ ಸಹ ಇವರಿಗೆ ದೊರೆಯದೆ ತುಂಬಾ ತೊಂದರೆ ಬಂದಿದೆಯೆಂದು ಹೇಳುತ್ತೇನೆ. ನಮ್ಮ ಹರಿಜನ ಜನಾಂಗಕ್ಕೆ ಇತ್ತೀಚೆಗೆ ಮಾಸಲಾಗಿಟ್ಟಿರುವ ಶೇಕಡ 18ರಷ್ಟು ಸ್ಥಾನಗಳೂ ಕೂಡ ಅವರಿಗೀಗ ಸರಿಯಾಗಿ ದೊರೆಕುತ್ತಿಲ್ಲ. ಈ ರೀತಿಯಾಗಿ ಶೇಕಡಾ 18ರಷ್ಟು ಸ್ಥಾನಗಳನ್ನು ಈ ನಿಮ್ನ ವರ್ಗದವರುಗಳಿಗೆ ಮಾಸಲಾಗಿದಬೇಕೆಂಬ ಸರ್ಕಾರಿ ಆಜ್ಞೆ 1955ರಲ್ಲಿ ಹೊರಬಿತ್ತು. ಇಂಥ ಒಂದು ಆಜ್ಞೆ ಹೊರಡಿಸಬೇಕೆಂಬುದಾಗಿ ನಾವು ಸರ್ಕಾರದವರಿಗೆ ಒತ್ತಾಯಪಡಿಸುವುದಕ್ಕೆ ಪ್ರಾರಂಭಿಸಿದ ಐದು ವರ್ಷಗಳ ನಂತರ ಅವರು ಈ ಒಂದು ಆಜ್ಞೆಯನ್ನು ಈಗಹೊರಡಿಸಿರುತ್ತಾರೆ. ಹೀಗೊಂದು ಆರ್ಡರನ್ನು ಹೊರಡಿಸಲು ಇವರು ಐದು ವರ್ಷಗಳ ಕಾಲವನ್ನು ತೆಗೆದುಕೊಂಡಿದ್ದರ ಪರಿಣಾಮವಾಗಿ ಈ ಡಿವನ ಹರಿಜನರಿಗೆ ನ್ಯಾಯವಾಗಿ ದೊರಕಬೇಕಾದ ಬಾಲಬಿದ್ದಂಥ ಸ್ಥಾನಗಳೇ ಬಹಳ ಕಡಮೆಯಾಗಲು ಅವಕಾಶ ಆಯಿತು. ಇಷ್ಟೇ ಅಲ್ಲ. ಈ ಒಂದು ನಿರೂಪಣೆ ಹೊರಟಿರುವುದಾದರೂ ಕೇವಲ ನಾನ್ ಗೆಜೆಟೆಡ್ ಹುದ್ದೆಗಳಿಗೆ ಮಾತ್ರವೇ ಹೊರತು ಗೆಜೆಟೆಟ್ ಹುದ್ದೆಗಳಿಗಲ್ಲ. ಇಂಥದೇ ಒಂದು ಆಜ್ಞೆಯನ್ನು ಈ ಗೆಜೆಟೆಡ್ ಹುದ್ದೆಗಳಿಗೂ ಸಹ ನಮ್ಮ ಸರ್ಕಾರ ಯಾವತ್ತು ಹೊರಡಿಸುತ್ತದೋ ಆ ವಿಚಾರವನ್ನು ತಾವುಗಳೇ ಊಹಿಸಬೇಕಾಗಿದೆ. ಈ ಕಾರಣಗಳಿಗಾಗಿಯೇ ನಾನೀಗ ಆ P.S.C.ಗೆ ಒಬ್ಬರು ಹರಿಜನ ಸದಸ್ಯರನ್ನು ನೇಮಕಮಾಡತಕ್ಕ ಅಗತ್ಯ ಬಹಳ ವಾಗಿದೆ ಎಂದು ಹೇಳುತ್ತಿದ್ದೇನೆ.

ಆದ್ದರಿಂದ ನಾವು ಸ್ವಲ್ಪ ಯೋಚನೆ ಮಾಡಿ ನೋಡಿದ ಪಕ್ಷದಲ್ಲಿ ಐದು ವರ್ಷಗಳಿಂದಲೂ ನಮಗೆ ಈಗಿರತಕ್ಕ ತೊಂದರೆಗಳನ್ನು ಹಾಗ್ರತೆ ತಪ್ಪಿಸಿಕೊಳ್ಳುವುದಕ್ಕೆ ಮತ್ತು ಈಗಿರತಕ್ಕ ನಷ್ಟವನ್ನು ಜಾಗ್ರತೆ